SEVA BHARATHI
सेवा ही परमो धर्मः

ಫೆಬ್ರವರಿ - 2026
ಸಂಚಿಕೆ - 02
ಸಂಪುಟ - 07

ಮಾಸಿಕ e - ನ್ಯೂಸ್ ಲೆಟರ್

# ಸೇವಾಪಥ

ಸೇವಾಭಾರತಿ (ರಿ.), ಬೆಳ್ತಂಗಡಿ ತಾ||
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ -2022)



ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ - II ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ - 574216



## ಬೈಂದೂರಿನ ಹೇನಬೇರುವಿನಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ “ಸೇವಾಧಾಮ” ಪುನಶ್ಚೇತನ ಕೇಂದ್ರ

## ಸೇವಾಭಾರತಿ ಕನ್ಯಾಡಿ ಹೊಸ ವಿಶ್ವಸ್ಥ ಮಂಡಳಿ ರಚನೆ - ಅಧ್ಯಕ್ಷರಾಗಿ ಶ್ರೀ ಕೆ ವಿನಾಯಕ ರಾವ್ ಕನ್ಯಾಡಿ

## ಬೆಳ್ತಂಗಡಿ ಇತಿಹಾಸದಲ್ಲೇ ಸಾರ್ವಕಾಲಿಕ ದಾಖಲೆ ಬರೆದ ಕೊಕ್ಕಡದ ಬೃಹತ್ ರಕ್ತದಾನ ಶಿಬಿರ : 331 ಯೂನಿಟ್ಸ್ ರಕ್ತ ಸಂಗ್ರಹಣೆ

## ಅಪಘಾತ ನಿಲ್ಲಿಸದ ಹೋರಾಟ - ಬೆನ್ನುಹುರಿ ಅಪಘಾತಕ್ಕೊಳಗಾದ ನಾಗೇಶ್ ರವರ ಸ್ಫೂರ್ತಿದಾಯಕ ಕಥೆ

ಯಶೋಗಾಥೆ

## ನಮ್ಮಿಂದಿಷ್ಟು

**ಆತ್ಮೀಯರಿಗೆಲ್ಲ ನಮಸ್ಕಾರಗಳು,**

ಇದು ಇನ್ನೊಂದು ಸಣ್ಣ ಹೆಜ್ಜೆ. ದೃಢವಾದ ಹೆಜ್ಜೆ ಕೂಡ. ಅದೆಷ್ಟೋ ಮಂದಿ ಬೆನ್ನುಹುರಿ ಅಪಘಾತಗೊಂಡು ಒತ್ತಡ ಗಾಯಗಳಿಂದ ನರಳುತ್ತಿರುವವರಿಗೊಂದು ಭರವಸೆಯ ಆಶಾಕಿರಣ. ಬೈಂದೂರು ತಾಲೂಕಿನ ಹೇನಬೇರುವಿನಲ್ಲಿ ಪ್ರಾರಂಭಗೊಂಡ ಗಾಯನಿರ್ವಹಣೆ ಹಾಗೂ ಪುನಶ್ಚೇತನ ಕೇಂದ್ರದ ಬಗ್ಗೆ ನಾನು ಹೇಳುತ್ತಿರುವುದು.

ಬದುಕೇ ಇಲ್ಲ ಎನ್ನುವ ಕಾಲವೊಂದಿತ್ತು. ಆದರೆ ಬೆಳ್ತಂಗಡಿ ತಾಲೂಕಿನ ಸೌತಡ್ಕದ ಸೇವಾಧಾಮವು ಕೊರಗಿದ ಬದುಕನ್ನು ಬದಲಿಸಿ ವಿಶ್ವಾಸದ ಬದುಕನ್ನು ತೋರಿಸುವ ಕಾರ್ಯಕ್ಕೆ 2018 ರಲ್ಲಿ ಅಡಿಯಿಟ್ಟಿತು. ಈಗ ಇದಕ್ಕಿಂತ ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಒತ್ತಡ ಗಾಯದಿಂದ ನರಳುತ್ತಿರುವವರ ಬದುಕಿಗೆ ಆಸರೆಯಾಗಿ ಬೈಂದೂರಿನಲ್ಲಿ ಕೇಂದ್ರವನ್ನು ಪ್ರಾರಂಭಿಸಿದೆ. ಅಧಿಕೃತವಾಗಿ ಉದ್ಘಾಟನೆಗೆ ದಿನಗಣನೆ ಪ್ರಾರಂಭಿಸಿಯಾಗಿದೆ.

ಜನಮಾನಸ ಅಂತಿರುವ ಶಾಸಕ ತನ್ನ ತಾಲೂಕಿನಲ್ಲಿ ನಿಂತು ಹೋದ ಕಿರಿಯ ಪ್ರಾಥಮಿಕ ಶಾಲೆಯನ್ನು ಪೂರ್ತಿಯಾಗಿ ಗಗಾಲಿಕುರ್ಚಿಸ್ನೇಹಿ ಕಟ್ಟಡವನ್ನಾಗಿಸಿ ನಮ್ಮ ಸಂಸ್ಥೆಗೆ ಹಸ್ತಾಂತರಿಸಿದ್ದು ಒಂದು ಕಡೆಯಾದರೆ ಇನ್ನೊಂದು ಕಡೆ corporate ದಿಗ್ಗಜ Wipro ದ Ajim Premji Foundation ತನ್ನ CSR ನ್ನು ಈ ಕೇಂದ್ರಕ್ಕಾಗಿ ಒದಗಿಸಿರುವುದು ದಿವ್ಯಾಂಗ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಯಾಗಿದೆ. ಒಟ್ಟಿನಲ್ಲಿ ಸೇವಾ ಹಿ ಪರಮೋಧರ್ಮ ಅಂತಿರುವ ನಮ್ಮ ಸಂಸ್ಥೆಗೆ ಅಭಿಮಾನ.

2026-2029 ನೇ ವರ್ಷಕ್ಕೆ ನೂತನ ಆಡಳಿತ ಮಂಡಳಿಯು ರಚನೆಗೊಂಡು ಕಾರ್ಯಾನುಷ್ಠಾನದಲ್ಲಿ ತೊಡಗಿದೆ. ಅಧಿಕೃತವಾಗಿ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಆಗಲಿಕ್ಕಿದೆ. ಆ ತಂಡವು ತನ್ನದೇ ಆದ ಕಾರ್ಯವೇಗದಲ್ಲಿ ಧುಮುಕಲಿ ಎಂಬುದು ನನ್ನ ಆಶಯ ಕೂಡ.

2ನೇ ಮಹಡಿ ನಿರ್ಮಾಣ ಕಾರ್ಯ ಪ್ರಾರಂಭಗೊಂಡಿದೆ. ಧನ ಕ್ರೋಢೀಕರಣಕ್ಕಾಗಿ ಅನೇಕ ಸವಾಲುಗಳಿದ್ದರೂ ಕಟ್ಟಡದ ನಿರ್ಮಾಣ ಕಾರ್ಯ ನಡೆಯುತ್ತಿರಬೇಕೆಂಬ ಸಂಕಲ್ಪ ನಮ್ಮೆಲ್ಲರದು. ಮೊದಲ ಮಹಡಿಯ ಕೆಲಸ ಪೂರ್ಣಗೊಳ್ಳಲು LIC of Indian ದ CSR ಅನ್ನು ಎದುರುನೋಡುತ್ತಿದ್ದೇವೆ. .

ಬೆಳ್ತಂಗಡಿ ಇತಿಹಾಸದಲ್ಲೇ ಸಾರ್ವಕಾಲಿಕ ದಾಖಲೆ ಬರೆದ ಕೊಕ್ಕಡದ ಬೃಹತ್ ರಕ್ತದಾನ ಶಿಬಿರದಲ್ಲಿ 331 ಯೂನಿಟ್ಸ್ ರಕ್ತ ಸಂಗ್ರಹಣೆಯಾಗಿದೆ ಹಾಗೂ ಧರ್ಮಸ್ಥಳದ ಗ್ರಾಮ ಪಂಚಾಯತ್ ವತಿಯಿಂದ ನಡೆದ ರಕ್ತದಾನ ಶಿಬಿರದಲ್ಲಿ 103 ಯೂನಿಟ್ಸ್ ರಕ್ತ ಸಂಗ್ರಹಣೆಯಾಗಿದೆ. ಎಲ್ಲರ ಸಹಕಾರದಿಂದ ಈ ಎರಡು ಶಿಬಿರಗಳು ಬಹಳ ಯಶಸ್ವಿಯಾಗಿ ನೆರವೇರಿದೆ.

ಒಟ್ಟಿನಲ್ಲಿ ಸೇವಾ ಕಾರ್ಯ ನಿರಂತರ




**ಸೇವಾ ಹಿ ಪರಮೋ ಧರ್ಮಃ**

ವಂದನೆಗಳೊಂದಿಗೆ

**ತಮ್ಮವ**

**ಕೆ. ವಿನಾಯಕ ರಾವ್**

## ಜನವರಿ ತಿಂಗಳ ಸೇವಾಪಥ ಬಿಡುಗಡೆ



**ಜನವರಿ ತಿಂಗಳ ಸೇವಾಭಾರತಿಯ ಸೇವಾಕಾರ್ಯಗಳ ಈ - ನ್ಯೂಸ್ ಲೆಟರ್ ಸೇವಾಪಥವನ್ನು ಶ್ರೀ ಕ್ಷೇತ್ರ ಧರ್ಮಸ್ಥಳದ ಪಾರುಪತ್ಯಗಾರರಾದ ಶ್ರೀ ಲಕ್ಷ್ಮೀನಾರಾಯಣ ರಾವ್ ರವರು ಬಿಡುಗಡೆಗೊಳಿಸಿರುತ್ತಾರೆ.**

### ನಮ್ಮ ವಿಳಾಸ :

**ಪ್ರಧಾನ ಕಚೇರಿ**

**ಸೇವಾನಿಕೇತನ, ಕನ್ಯಾಡಿ - II ,ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು**
574 216 : 99454 91241

### ಸೇವಾ ಕೇಂದ್ರ :

**ಸೇವಾಧಾಮ ಸೌತಡ್ಕ**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)**
**ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ ಕೊಕ್ಕಡ ಗ್ರಾಮ**
574 198 : 94482 54888

**ಸೇವಾಧಾಮ ಬೈಂದೂರು**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಒತ್ತಡ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರ) ಹೇನಬೇರು ಬೈಂದೂರು, ಪಡುವರಿ ಪೋಸ್ಟ್, ಬೈಂದೂರು ತಾಲೂಕು, ಉಡುಪಿ ಜಿಲ್ಲೆ - 576214**

### ನಮ್ಮ ತಂಡ :

| | | |
|---|---|---|
| ಶ್ರೀ ಕೆ. ವಿನಾಯಕ ರಾವ್ | - | ಅಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | - | ಉಪಾಧ್ಯಕ್ಷರು |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | - | ಕಾರ್ಯದರ್ಶಿ |
| ಶ್ರೀ ಜಯರಾಜ್ ಸಾಲ್ಯಾನ್ | - | ಖಜಾಂಚಿ |
| ಶ್ರೀಮತಿ ಸ್ವರ್ಣಗೌರಿ | - | ಟ್ರಸ್ಟಿ |
| ಶ್ರೀ ಕೆ. ಯು. ಗಿರೀಶ್ ರಾವ್ | - | ಟ್ರಸ್ಟಿ |
| ಶ್ರೀ ಪೃಥ್ವೀಶ | - | ಟ್ರಸ್ಟಿ |

### ಸಲಹಾ ಮಂಡಳಿ :

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಡಾ. ಎ. ಜಯಕುಮಾರ್ ಶೆಟ್ಟಿ
ಶ್ರೀಮತಿ ಮನೋರಮ ಭಟ್
ಶ್ರೀ ವಿಜಯ ಕೊಡವೂರು
ಶ್ರೀ ಆದಿತ್ಯ ಕಲ್ಲೂರಾಯ
ಶ್ರೀ ಕಿರಣ್ ರಾಜ್ ಕೆ.

### ಸಂಚಾಲಕರು :

| | | |
|---|---|---|
| ಶ್ರೀ ಕೆ. ಪುರಂದರ ರ | - | ಸೇವಾಧಾಮ |
| ಶ್ರೀಮತಿ ಮಮತಾ ಬೊಲ್ಮ | - | ಸಬಲಿನಿ |
| ಶ್ರೀ ಅಖಿಲೇಶ್ ಶೆಟ್ಟಿ, ನೇತ್ರಾವತಿ | - | ಆರೋಗ್ಯಮ್ |

# ಬೈಂದೂರಿನ ಹೇನಬೇರುವಿನಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ "ಸೇವಾಧಾಮ" ಪುನಶ್ಚೇತನ ಕೇಂದ್ರ










**ಬೈಂದೂರು (ಫೆ.08:)** ಸಮೃದ್ಧ ಬೈಂದೂರು ಪರಿಕಲ್ಪನೆಯ ಸೇವಾ ಸೇತು ಯೋಜನೆಯಡಿಯಲ್ಲಿ ಸೇವಾಭಾರತಿ (ರಿ.)ಕನ್ಯಾಡಿ ಸಹಯೋಗದೊಂದಿಗೆ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಬೈಂದೂರಿನ ಹೇನಬೇರುವಿನಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಪುನಶ್ಚೇತನ ಕೇಂದ್ರ ಸೇವಾಧಾಮದ ಪ್ರವೇಶೋತ್ಸವದ ಅಂಗವಾಗಿ ಪೂಜಾ ಕಾರ್ಯಕ್ರಮವನ್ನು ಫೆಬ್ರವರಿ 7 ಮತ್ತು 8 ರಂದು ನೆರವೇರಿಸಲಾಯಿತು.

# ಕನ್ಯಾಡಿ ಸೇವಾನಿಕೇತನಕ್ಕೆ ಸೀತಾರಾಮ್ ಜಿಂದಾಲ್ ಫೌಂಡೇಷನ್‌ನ ಜೈ ಕುಮಾರ್ ಭೇಟಿ



**ಕನ್ಯಾಡಿ (ಫೆ. 11):** ಸೀತಾರಾಮ್ ಜಿಂದಾಲ್ ಫೌಂಡೇಷನ್‌ನ ಶ್ರೀ ಜೈ ಕುಮಾರ್ ರವರು ಫೆಬ್ರವರಿ 11 ರಂದು ಕನ್ಯಾಡಿ ಸೇವಾನಿಕೇತನದ ನೂತನ ಕಾರ್ಯಾಲಯ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೇಟಿ ನೀಡಿದರು. ನೂತನ ಕಟ್ಟಡವನ್ನು ವೀಕ್ಷಿಸಿದ ನಂತರ ಸಂಸ್ಥೆಯ ವಿವಿಧ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದು ವಿಮರ್ಶೆ ಮಾಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ಕೇಂದ್ರದ ಸನಿವಾಸಿಗಳು, ಆರೈಕೆದಾರರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸೇವಾಭಾರತಿ ಕನ್ಯಾಡಿ ಹೊಸ ವಿಶ್ವಸ್ಥ ಮಂಡಳಿ ರಚನೆ - ಅಧ್ಯಕ್ಷರಾಗಿ ಶ್ರೀ ಕೆ ವಿನಾಯಕ ರಾವ್ ಕನ್ಯಾಡಿ



ಶ್ರೀ ಕೆ. ವಿನಾಯಕ ರಾವ್
**ಅಧ್ಯಕ್ಷರು**




ಶ್ರೀ ಬಾಲಕೃಷ್ಣ
**ಉಪಾಧ್ಯಕ್ಷರು**




ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ
**ಕಾರ್ಯದರ್ಶಿ**



ಶ್ರೀ ಎ.ಜೈ ರಾಜ್ ಸಾಲಿಯಾನ್ ಕಾನರ್ಪ
**ಕೋಶಾಧಿಕಾರಿ**



ಶ್ರೀಮತಿ ಸ್ವರ್ಣಗೌರಿ
**ಟ್ರಸ್ಟಿ**



ಶ್ರೀ ಗಿರೀಶ್ ರಾವ್ ಕೆ ಯು
**ಟ್ರಸ್ಟಿ**



ಶ್ರೀ ಪೃಥ್ವೀಶ
**ಟ್ರಸ್ಟಿ**

# ಬೆಳ್ತಂಗಡಿ ಇತಿಹಾಸದಲ್ಲೇ ಸಾರ್ವಕಾಲಿಕ ದಾಖಲೆ ಬರೆದ ಕೊಕ್ಕಡದ ಬೃಹತ್ ರಕ್ತದಾನ ಶಿಬಿರ : 331 ಯೂನಿಟ್ಸ್ ರಕ್ತ ಸಂಗ್ರಹಣೆ





**ಕೊಕ್ಕಡ (ಫೆ.01):** ಟೀಂ ಸುಹಾಸ್ ಶೆಟ್ಟಿ ಕೊಕ್ಕಡ ಇದರ ಆಶ್ರಯದಲ್ಲಿ, ನೈಮಿಷ ವೆಂಚರ್ಸ್, ಸೌತಡ್ಕ, ಇದರ ಪ್ರಾಯೋಜಕತ್ವದಲ್ಲಿ, ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್(ರಿ.) ಸೌತಡ್ಕ, ಸೇವಾಭಾರತಿ (ರಿ.), ಕನ್ಯಾಡಿ ||, ಶ್ರೀರಾಮ ಸೇವಾ ಮಂದಿರ ಕೊಕ್ಕಡ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಕೊಕ್ಕಡ, ಕೆ.ಎಂ.ಸಿ. ರಕ್ತ ನಿಧಿ ಮಂಗಳೂರು, ರೋಟರಿ ಕ್ಯಾಂಪ್ಕೋ ಬ್ಲಡ್ ಬ್ಯಾಂಕ್ ಪುತ್ತೂರು ಇದರ ಸಹಭಾಗಿತ್ವದಲ್ಲಿ, ದಿ | ಸುಹಾಸ್ ಶೆಟ್ಟಿ ಬಜ್ಪೆ ಇವರ ಸ್ಮರಣಾರ್ಥ ಬೃಹತ್ ರಕ್ತದಾನ ಶಿಬಿರವು ಫೆಬ್ರವರಿ 01 ರಂದು ಕೊಕ್ಕಡದ ಶ್ರೀ ರಾಮ ಸೇವಾ ಮಂದಿರದಲ್ಲಿ ಜರಗಿತು. ದಿ. ಸುಹಾಸ್ ಶೆಟ್ಟಿಯವರ ತಂದೆ ಮತ್ತು ತಾಯಿ ಶ್ರೀಮತಿ ಸುಲೋಚನ ಎಂ. ಶೆಟ್ಟಿ ಮತ್ತು ಶ್ರೀ ಮೋಹನ್ ಶೆಟ್ಟಿ ರವರು ಉದ್ಘಾಟಿಸಿ, ಶುಭಹಾರೈಸಿದರು. ದಿ. ಸುಹಾಸ್ ಶೆಟ್ಟಿಯವರ ತಂದೆ ಮತ್ತು ತಾಯಿ ಶ್ರೀಮತಿ ಸುಲೋಚನ ಎಂ. ಶೆಟ್ಟಿ ಮತ್ತು ಶ್ರೀ ಮೋಹನ್ ಶೆಟ್ಟಿ ರವರು ಉದ್ಘಾಟಿಸಿ, ಶುಭಹಾರೈಸಿದರು.

ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಹರೀಶ್ ಪೂಂಜ, ಬೆಳ್ತಂಗಡಿ ಧಾರ್ಮಿಕ ಮುಖಂಡರಾದ ಶ್ರೀ ಡಿ. ಕಿರಣ್ ಚಂದ್ರ ಪುಷ್ಪಗಿರಿ, ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ನ ಅಧ್ಯಕ್ಷರು ಶ್ರೀ ಕೃಷ್ಣ ಭಟ್ ಹಿತ್ತಿಲು, ಕೊಕ್ಕಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಅಧ್ಯಕ್ಷರು ಹಾಗೂ SCDCC BANK ನಿರ್ದೇಶಕರಾದ ಶ್ರೀ ಕುಶಾಲಪ್ಪ ಗೌಡ ಪೂವಾಜೆ, ಕನ್ಯಾಡಿ ಸೇವಾಭಾರತಿ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ಸೌತಡ್ಕ ನೈಮಿಷ ವೆಂಚರ್ಸ್ ಉದ್ಯಮಿ ಶ್ರೀ ಬಾಲಕೃಷ್ಣ ನೈಮಿಷ, , ಫ್ರೆಂಡ್ಸ್ ಸುರತ್ಕಲ್ ತುಳುನಾಡ ಬಿರುವೆರ್ (ರಿ.), ಸಂಸ್ಥಾಪಕರುಶ್ರೀ ಲೋಕೇಶ್ ಕೋಡಿಕೆರೆ, ಪಾರಿಜಾತ ಹೋಟೆಲ್ ಮಾಲಕರು ಹಾಗೂ ಸೇವಾಭಾರತಿ ಕನ್ಯಾಡಿ ಆರೋಗ್ಯಮ್ ನ ಸಂಚಾಲಕರಾದ ಶ್ರೀ ಅಖಿಲೇಶ್ ಶೆಟ್ಟಿ ನೇತ್ರಾವತಿ, ಟೀಮ್ ಕಳವಾರಿನ ಸದಸ್ಯರಾದ ಶ್ರೀ ಸಚಿನ್ ಒಡ್ಡೂರು, ಬಜರಂಗದಳ ಕಾಟಿಪಳ್ಳ ಸುರತ್ಕಲ್ ನ ಸದಸ್ಯರು, ಡಾ. ವಾಣಿಕ KMC ಆಸ್ಪತ್ರೆ, ರೋಟರಿ ಕ್ಯಾಂಪ್ಕೋ ಬ್ಲಡ್ ಬ್ಯಾಂಕ್ ಪುತ್ತೂರು ರೋ| ಡಾ. ರಾಮಕೃಷ್ಣ ರಾವ್, KSTA ಕರ್ನಾಟಕ ಸ್ಟೇಟ್ ಟೈಲರ್ಸ್ ಎಸೋಸಿಯೇಷನ್ ಉಜಿರೆಯ ಶ್ರೀಮತಿ ವೇದಾವತಿ ಜನಾರ್ಧನ್ , ಹಾಗೂ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಧಾರ್ಮಿಕ ಮುಖಂಡರಾದ ಶ್ರೀ ಕಿರಣ್ ಚಂದ್ರ ಪುಷ್ಪಗಿರಿ ಇವರುಎಲ್ಲಾ ರಕ್ತದಾನಿಗಳಿಗೂ ಶ್ರೀ ಮದ್ಭಗವತ್ ಗೀತಾ ಪುಸ್ತಕವನ್ನು ನೀಡಿ ಶುಭ ಹಾರೈಸಿದರು.

ಸುಮಾರು 54 ಬಾರಿ ರಕ್ತದಾನ ಮಾಡಿದಂತಹ ಹಿರಿಯ ಭಜಕರಾದ ಶ್ರೀ ಪುರುಷೋತ್ತಮ ಮಡ್ಯಲಗುಂಡಿ ಇವರನ್ನು ಗಣ್ಯರ ಸಮ್ಮುಖದಲ್ಲಿ ಗುರುತಿಸಿ, ಗೌರವಿಸಲಾಯಿತು.

ಶಿಬಿರದ ಯಶಸ್ಸಿಗೆ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ (ರಿ.) ಸೌತಡ್ಕ, ಸೇವಾ ಭಾರತಿ (ರಿ.) ಕನ್ಯಾಡಿ ||, ಶ್ರೀರಾಮ ಸೇವಾ ಮಂದಿರ ಕೊಕ್ಕಡ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಕೊಕ್ಕಡ, ಉಜಿರೆ ಹವ್ಯಕ ವಲಯ ಉಪ್ಪಿನಂಗಡಿ ಮಂಡಲ, ಯುವ ಕೇಸರಿ ಕಾವು ಕೌಕ್ರಡಿ, ಸಿದ್ಧಿವಿನಾಯಕ ಸೇವಾ ಸಮಿತಿ ಗೋಳಿತೊಟ್ಟು, ಯುವಶಕ್ತಿ ಫ್ರೆಂಡ್ ಮುಂಡೂರುಪಳಿಕೆ, ಹಿಂದೂ ಜಾಗರಣ ವೇದಿಕೆ ಶಿಶಿಲ, ಟೀಂ ಸಿಂಧೂರ ನೆಲ್ಯಾಡಿ, ಅಶ್ವಥ ಗೆಳೆಯರ ಬಳಗ ಹೊಸಮಜಲು, ನೆಲ್ಯಾಡಿ, ಶಿವಶಕ್ತಿ ಫ್ರೆಂಡ್ಸ್ ಕಳೆಂಜ, ವೀರ ಕೇಸರಿ ಅನಾರು, ಶಕ್ತಿ ಆಟೋ ಚಾಲಕ ಮಾಲಕರ ಸಂಘ, ಕೊಕ್ಕಡ, ವಿಶ್ವ ಹಿಂದೂ ಪರಿಷದ್ ಬಜರಂಗದಳ ಶಿವಾಗ್ನಿ ಶಾಖೆ, ಕಳವಾರು, S.VT. ಸ್ಪೋರ್ಟ್ಸ್ ಕ್ಲಬ್ ಪಟ್ರಮೆ, ವಿಶ್ವ ಹಿಂದೂ ಪರಿಷದ್ ಬಜರಂಗದಳ ರೆಖ್ಯ, ಫ್ರೆಂಡ್ಸ್ ಧರ್ಮಸ್ಥಳ, ಶ್ರದ್ಧಾ ಗೆಳೆಯರ ಬಳಗ ಉಪ್ಪಾರಪಳಿಕೆ, ಟೀಂ ಪುಷ್ಪಗಿರಿ, ಬೆಳ್ತಂಗಡಿ, ನವಶಕ್ತಿ ಆಟೋ ಚಾಲಕ ಮಾಲಕರ ಸಂಘ ಅರಸಿನಮಕ್ಕಿ, ಸ್ವಾಮಿ ಕೊರಗಜ್ಜ ಸೇವಾ ಟ್ರಸ್ಟ್ ಪಟ್ಲಡ್ಕ, ನಿಸರ್ಗ ಯುವಜನೇತರ ಮಂಡಲ (ರಿ.) ಬರೆಂಗಾಯ ನಿಡ್ಲೆ, ಫ್ರೆಂಡ್ಸ್ ಸುರತ್ಕಲ್ ತುಳುನಾಡ ಬಿರುವೆರ್ ರಿ., ಬಿಜೆಪಿ ಯುವಮೋರ್ಚ ಬೆಳ್ತಂಗಡಿ ಮಂಡಲ, ಅಶ್ವಸಿರಿ ಗೆಳೆಯರ ಬಳಗ ಪಾಂಡಿಬೆಟ್ಟು, ಕೊಣಾಲು, ಜೈ ಶ್ರೀ ರಾಮ್ ಫ್ರೆಂಡ್ಸ್ ಪಾರ್ಪಿಕಲ್ಲು ಸಹಕರಿಸಿದ್ದಾರೆ

ಟೀಮ್ ಸುಹಾಸ್ ಶೆಟ್ಟಿ ಸದಸ್ಯರಾದ ಶ್ರೀ ರುಕ್ಮಯ್ಯ ಮಡಿವಾಳ ಪ್ರಸ್ತಾವಿಕ ನುಡಿಗಳನ್ನಾಡಿ ಸ್ವಾಗತಿಸಿದರು, ಶ್ರೀ ಕೇಶವ ಹಳ್ಳಿಂಗೇರಿ ನಿರೂಪಿಸಿ, ಶ್ರೀ ಬಾಲಕೃಷ್ಣ ನೈಮಿಷ ಕಾರ್ಯಕ್ರಮದ ಬಗ್ಗೆ ಶುಭನುಡಿಗಳನ್ನಾಡಿ ಧನ್ಯವಾದವಿತ್ತರು. ಶಿಬಿರದಲ್ಲಿ ಒಟ್ಟು 331 ಯೂನಿಟ್ ರಕ್ತ ಸಂಗ್ರಹಣೆಯಾಯಿತು.

## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ಫೆಬ್ರವರಿ ತಿಂಗಳಲ್ಲಿ ಡಿಸ್ಚಾರ್ಜ್ ಆದವರು





ಶ್ರೀ ರಾಜ್ ಕುಮಾರ್, ಮಂಗಳೂರು

# ಧರ್ಮಸ್ಥಳ ಗ್ರಾಮ ಪಂಚಾಯತ್ ವಿವಿಧ ಸಂಘ-ಸಂಸ್ಥೆಗಳೊಂದಿಗೆ ಬೃಹತ್ ರಕ್ತದಾನ ಶಿಬಿರ




**ಧರ್ಮಸ್ಥಳ (ಫೆ.11):** ಗ್ರಾಮ ಪಂಚಾಯತ್ ಧರ್ಮಸ್ಥಳ ಆಶ್ರಯದಲ್ಲಿ ಹಾಗೂ ಕೆಎಂಸಿ ಆಸ್ಪತ್ರೆ ಮಂಗಳೂರು ರಕ್ತ ನಿಧಿ ವಿಭಾಗ, ಶ್ರೀ ಕ್ಷೇತ್ರ ಧರ್ಮಸ್ಥಳ ವಿವಿಧ ವಿಭಾಗಗಳು,ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ( ರಿ ),ಕೃಷಿ ಪತ್ತಿನ ಸಹಕಾರಿ ಸಂಘ ಧರ್ಮಸ್ಥಳ, ಸೇವಾಭಾರತಿ(ರಿ). ಕನ್ಯಾಡಿ-II, ವೀರಕೇಸರಿ ಬೆಳ್ತಂಗಡಿ, ಆದಿ ದ್ರಾವಿಡ ಸಮಾಜ ಸೇವಾ ಸಂಘ ಧರ್ಮಸ್ಥಳ, ಶ್ರೀ ಚಾಮುಂಡೇಶ್ವರಿ ಭಜನಾ ಮಂಡಳಿ ಮುಳಿಕ್ಕಾರು, ಇವರ ಸಹಕಾರದೊಂದಿಗೆ ಬೃಹತ್ ರಕ್ತದಾನ ಶಿಬಿರವು ಫೆಬ್ರವರಿ 10 ರಂದು ಧರ್ಮಸ್ಥಳ ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ಜರಗಿತು.

ಧರ್ಮಸ್ಥಳ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ವಿಮಲಾ ರವರು ರಕ್ತದಾನ ಶಿಬಿರವನ್ನು ದೀಪ ಬೆಳಗಿಸುವುದರ ಮೂಲಕ ಚಾಲನೆ ನೀಡಿ ಶುಭಹಾರೈಸಿದರು..

ಧರ್ಮಸ್ಥಳ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಶ್ರೀ ಪಿ ಶ್ರೀನಿವಾಸ್ ರಾವ್ ಮಾತನಾಡಿ ರಕ್ತದಾನ ಶ್ರೇಷ್ಠದಾನ ರಕ್ತದಾನ ಮಾಡುವುದರಿಂದ ಅದೆಷ್ಟೋ ಜೀವವನ್ನು ಉಳಿಸಬಹುದು. ರಕ್ತದ ಅಗತ್ಯವಿರುವ ವ್ಯಕ್ತಿ ಪ್ರಸವ ವೇದನೆಯಿಂದ ಬಳಲುತ್ತಿರುವ ತಾಯಿಯಾಗಿರಬಹುದು, ಸಂಸಾರದ ಇಡೀ ಹೊಣೆಯು ತನ್ನ ಮೇಲಿದ್ದು ಅಪಘಾತಕ್ಕೆ ಗುರಿಯಾಗಿ ಬಳಲುತ್ತಿರುವವನಾಗಿರಬಹುದು, ತೀವ್ರ ರಕ್ತಸ್ರಾವದಿಂದ ಅಪಾಯದ ಅಂಚಿನಲ್ಲಿರುವ ಮುಂದಿನ ಪೀಳಿಗೆಯ ತರುಣನಾಗಿರಬಹುದು, ಸಕಾಲದಲ್ಲಿ ಸಿಗುವ ರಕ್ತ ಇಂತಹ ವ್ಯಕ್ತಿಗಳ ಅಮೂಲ್ಯ ಜೀವವನ್ನು ಉಳಿಸಬಲ್ಲುದು. ಗ್ರಾಮ ಪಂಚಾಯತ್ ಇತರ ಸಂಘ ಸಂಸ್ಥೆಗಳೊಂದಿಗೆ ಸೇರಿಕೊಂಡು ಅತ್ಯುತ್ತಮವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ ಎಂದು ಸಂತಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬೆಳ್ತಂಗಡಿ ಲಯನ್ಸ್ ಕ್ಲಬ್ ಅಧ್ಯಕ್ಷರು ಹಾಗೂ ನೋಟರಿ ವಕೀಲರಾದ ಲI ಮುರಳಿ ಬಳಿಪ , ಶ್ರೀ ಕ್ಷೇತ್ರ ಧರ್ಮಸ್ಥಳ ವಿಭಾಗದಿಂದ ಶ್ರೀ ಭುಜಬಲಿ, ಗ್ರಾಮ ಪಂಚಾಯತ್ ಸದಸ್ಯರಾದ ಶ್ರೀ ಮುರಳಿಧರದಾಸ್, ಶ್ರೀ ದಿನೇಶ್ ರಾವ್, ಶ್ರೀಮತಿ ಸುನಿತಾ ಶ್ರೀಧರ್, ಶ್ರೀಮತಿ ಲಕ್ಷ್ಮಿ, ಶ್ರೀಮತಿ ವಸಂತಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ರಿಜನಲ್ ಡೈರೆಕ್ಟರ್ ಶ್ರೀ ಜಯರಾಮ್, ಧರ್ಮಸ್ಥಳ ಕೃಷಿ ಪತ್ತಿನ ಸಹಕಾರಿ ಸಂಘ ಅಧ್ಯಕ್ಷರಾದ ಶ್ರೀ ಪ್ರೀತಂ, ಕೆಎಂಸಿ ಆಸ್ಪತ್ರೆ ಮಂಗಳೂರು ವೈದ್ಯಾಧಿಕಾರಿ ಡಾ. ಪ್ರಜ್ವಲ್, ಕನ್ಯಾಡಿ ಸೇವಾಭಾರತಿ ಆರೋಗ್ಯ ವಿಭಾಗದ ಸಂಚಾಲಕರಾದ ಶ್ರೀ ಅಖಿಲೇಶ್ ಶೆಟ್ಟಿ, ಆದಿ ದ್ರಾವಿಡ ಸಮಾಜ ಸೇವಾ ಸಂಘದ ಅಧ್ಯಕ್ಷರಾದ ಶ್ರೀ ಗಣೇಶ್ ಡಿ ಅಶೋಕನಗರ, ಬೆಳ್ತಂಗಡಿ ಲಿಯೋ ಕ್ಲಬ್ ನ ಕಾರ್ಯದರ್ಶಿ ಶ್ರೀ ದೀಕ್ಷಿತ್, ಚಾಮುಂಡೇಶ್ವರಿ ಭಜನಾ ಮಂಡಳಿ ಅಧ್ಯಕ್ಷರಾದ ಶ್ರೀ ಉಮಾನಾಥ, ಬೆಳ್ತಂಗಡಿ ಲಯನ್ಸ್ ಕ್ಲಬ್ ನ ಮಾಜಿ ಪ್ರಾಂತ್ಯ ಅಧ್ಯಕ್ಷರಾದ ಲI ವಸಂತ ಶೆಟ್ಟಿ ಶ್ರದ್ಧಾ, ಸೇವಾಭಾರತಿಯ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್ ಎಸ್, ಶೌರ್ಯ ವಿಪತ್ತು ನಿರ್ವಹಣೆ ತಂಡದ ಅಧ್ಯಕ್ಷರು ಪದಾಧಿಕಾರಿಗಳು , ಸಂಜೀವಿನಿ ಒಕ್ಕೂಟದ ಸದಸ್ಯರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿಯ ಸಿಬ್ಬಂದಿ ವರ್ಗ, ಧರ್ಮಸ್ಥಳ ಗ್ರಾಮ ಪಂಚಾಯತ್ ಸಿಬ್ಬಂದಿ ವರ್ಗ, ಗ್ರಾಮಸ್ಥರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸಂಚಾಲಕರು ಧರ್ಮಸ್ಥಳ ಗ್ರಾಮ ಪಂಚಾಯತ್ ಸದಸ್ಯರಾದ ಶ್ರೀ ಸುಧಾಕರ ಗೌಡ ಪೂರ್ಜೆ ಇವರು ಪ್ರಾಸ್ತಾವಿಕ ನುಡಿಗಳನ್ನಾಡಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಗಾಯತ್ರಿ ಸ್ವಾಗತಿಸಿದರು, ಸಿಬ್ಬಂದಿ ಡಾ. ದೇವಿಪ್ರಸಾದ್ ಬೊಲ್ಮ ಕಾರ್ಯಕ್ರಮ ನಿರೂಪಿಸಿ, ಗ್ರಾಮ ಪಂಚಾಯತ್ ಕಾರ್ಯದರ್ಶಿ ಶ್ರೀಮತಿ ಪ್ರಮೀಳಾ ಧ್ಯವಾದವಿತ್ತರು. ಕಾರ್ಯಕ್ರಮವನ್ನು ನಾಡಗೀತೆಯೊಂದಿಗೆ ಪ್ರಾರಂಭಿಸಿ ರಾಷ್ಟ್ರಗೀತೆಯೊಂದಿಗೆ ಮುಕ್ತಾಯಗೊಳಿಸಲಾಯಿತು. ಒಟ್ಟು 105 ಯೂನಿಟ್ಸ್ ರಕ್ತ ಸಂಗ್ರಹಣೆಯಾಯಿತು.

## ಬೆಳ್ತಂಗಡಿಯ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಂಘದಿಂದ ನೂತನ ಕಟ್ಟಡ ನಿರ್ಮಾಣಕ್ಕೆ ರೂ. 25,000/- ದೇಣಿಗೆ



**ಕನ್ಯಾಡಿ (ಜ. 29):** ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಂಘ ಬೆಳ್ತಂಗಡಿಯ ಅಧ್ಯಕ್ಷರಾದ ಶ್ರೀ ಪ್ರಶಾಂತ್ ರಾವ್, ಕಾರ್ಯದರ್ಶಿ ಶ್ರೀ ಪ್ರಕಾಶ್ ರಾವ್, ಖಜಾಂಚಿ ಶ್ರೀಮತಿ ರೇಖಾ ಸುಧೀರ್, ಮಹಿಳಾ ಅಧ್ಯಕ್ಷೆ ಶ್ರೀಮತಿ ರಾಜೇಶ್ವರಿ ಎಂ, ಗೌರವ ಅಧ್ಯಕ್ಷೆ ಶ್ರೀಮತಿ ಶಾಂತ ಬಿ ರವರು ಕನ್ಯಾಡಿ ಸೇವಾನಿಕೇತನಕ್ಕೆ ಫೆಬ್ರವರಿ 09 ರಂದು ಭೇಟಿ ನೀಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 25,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣ ಗೌರಿ, ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ , ಕಾರ್ಯದರ್ಶಿ ಶ್ರೀ ಬಾಲಕೃಷ್ಣ ನೈಮಿಷ, ಟ್ರಸ್ಟಿ ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ ಹಾಗೂ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್ ಎಸ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು.


## ಉಜಿರೆಯ ಶಾಂತ ಕುಮಾರಿ ಬಿ ರವರಿಂದ ನೂತನ ಕಟ್ಟಡ ನಿರ್ಮಾಣಕ್ಕೆ ರೂ. 15,000/- ದೇಣಿಗೆ :



**ಕನ್ಯಾಡಿ (ಜ. 29):** ಶ್ರೀಮತಿ ಶಾಂತಕುಮಾರಿ ಬಿ ಉಜಿರೆ ಇವರು ಕನ್ಯಾಡಿ ಸೇವಾನಿಕೇತನಕ್ಕೆ ಫೆಬ್ರವರಿ 09 ರಂದು ಭೇಟಿ ನೀಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 15,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣ ಗೌರಿ, ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ , ಕಾರ್ಯದರ್ಶಿ ಶ್ರೀ ಬಾಲಕೃಷ್ಣ ನೈಮಿಷ, ಟ್ರಸ್ಟಿ ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ ಹಾಗೂ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್ ಎಸ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು.

# ಸೇವಾನಿಕೇತನದಲ್ಲಿ ವಾರದ ಭಜನೆ



ಶ್ರೀಮತಿ ಸ್ವಾತಿ ಪೈ ಮತ್ತು ತಂಡ, ಕನ್ಯಾಡಿ



ಶ್ರೀಮತಿ ವಿಜಯಲಕ್ಷ್ಮೀ ಮತ್ತು ತಂಡ, ಕನ್ಯಾಡಿ

ಸ್ಥಳ: ಸೇವಾನಿಕೇತನ, ಕನ್ಯಾಡಿ-II

ಭಜನಾ ತಂಡ

ಶ್ರೀ ದುರ್ಗಾ ಮಾತೃ ಮಂಡಳಿ, ಕನ್ಯಾಡಿ-II

ಶ್ರೀ ದುರ್ಗಾ ಮಾತೃ ಮಂಡಳಿ, ಕನ್ಯಾಡಿ



ಶ್ರೀ ರಾಮ ಭಜನಾ ಮಂಡಳಿ, ಮುಲಾರ್ - ಮುಂಡಾಜೆ

# "ಪುನಶ್ಚೇತನದ ಹಾದಿಯಲ್ಲಿ ಚೈತನ್ಯ ತುಂಬುವ ಸೇವಾಧಾಮ!"














## ಕನ್ಯಾಡಿ ಸೇವಾನಿಕೇತನಕ್ಕೆ ಶ್ರೀಮತಿ ವಿಶಾಲ ಕುಮಾರಿ ಭೇಟಿ

**ಕನ್ಯಾಡಿ (ಫೆ. 28):** ಕನ್ಯಾಡಿ ಅಜ್ಜೋಳಿಗೆ ಕುಟುಂಬದ ಶ್ರೀಮತಿ ವಿಶಾಲ ಕುಮಾರಿ ಹಾಗೂ ಅವರ ಮಗ ಶ್ರೀ ಶೌರ್ಯ ರವರು ಫೆಬ್ರವರಿ 28 ರಂದು ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿದರು.

ನೂತನ ಕಟ್ಟಡವನ್ನು ವೀಕ್ಷಿಸಿದ ನಂತರ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ತಿಳಿದು ಸಂತೋಷ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಕೊಕ್ಕಡದ ಈಶ್ವರ್ ಭಟ್ ಹಿತ್ತಿಲು ರವರಿಂದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ. 5,000/- ದೇಣಿಗೆ



**ಕೊಕ್ಕಡ (ಫೆ. 16):** ಈಶ್ವರ್ ಭಟ್ ಹಿತ್ತಿಲುರವರು ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 5,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಸೇವಾಭಾರತಿ ಟ್ರಸ್ಟಿ ಶ್ರೀ ಜೈ ರಾಜ್ ಸಾಲ್ಯಾನ್ ಕಾನರ್ಪ, ದಕ್ಷಿಣ ಕನ್ನಡ ಹಾಗೂ ಕೊಡಗು ಕ್ಷೇತ್ರ ಸಂಯೋಜಕರಾದ ಶ್ರೀ ಕುಸುಮಾಧರ್ ರವರು ದೇಣಿಗೆಯನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

ಈ ಸಂದರ್ಭದಲ್ಲಿ ಕೊಕ್ಕಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಕುಶಾಲಪ್ಪ ಗೌಡ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ನವೀನ್ ಉಪಸ್ಥಿತರಿದ್ದರು.

## ಸೇವಾಧಾಮ ಒತ್ತಡ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರಕ್ಕೆ ಭೇಟಿ




**ಬೈಂದೂರು (ಫೆ.24):** ಕೊಡ್ಲಾಡಿಯ ಶ್ರೀ ಪ್ರವೀಣ್ ಶೆಟ್ಟಿ, ಶ್ರೀ ವಿದ್ಯಾಧರ ಶೆಟ್ಟಿ, ಶ್ರೀ ಶೋಧನ್, ಶ್ರೀ ದಿನಕರ ಮತ್ತು ಶ್ರೀ ಸುಭಾಷ್ ರವರು ಹೆಣಬೇರುವಿನಲ್ಲಿರುವ ಸೇವಾಧಾಮ ಒತ್ತಡ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರಕ್ಕೆ ಫೆ. 24 ರಂದು ಭೇಟಿ ನೀಡಿದರು.

ಕೇಂದ್ರದಲ್ಲಿ ನಡೆಯುತ್ತಿರುವ ವಿವಿಧ ಚಟುವಟಿಕೆಗಳನ್ನು ವೀಕ್ಷಿಸಿ, ಸೇವಾಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ಕೇಂದ್ರದ ಎಲ್ಲ ಚಟುವಟಿಕೆಗಳು ಯಶಸ್ವಿಯಾಗಿ ಮುಂದುವರಿಯಲಿ ಎಂದು ಶುಭಹಾರೈಸಿದರು

ಈ ಸಂದರ್ಭದಲ್ಲಿ ಶ್ರೀ ಪ್ರವೀಣ್ ಶೆಟ್ಟಿ ಮತ್ತು ಶ್ರೀ ವಿದ್ಯಾಧರ ಶೆಟ್ಟಿ ತಮ್ಮ ವಿಶೇಷ ದಿನದ ಪ್ರಯುಕ್ತ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವುದಾಗಿ ಭರವಸೆ ನೀಡಿದರು. ಸೇವಾಭಾರತಿಯ ಪರವಾಗಿ ಅವರ ಸಹಕಾರ ಮತ್ತು ಪ್ರೋತ್ಸಾಹಕ್ಕೆ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಲಾಯಿತು

## ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ನಿಡ್ಲೆಯಿಂದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ.10,000/- ದೇಣಿಗೆ.



**ನಿಡ್ಲೆ (ಫೆ. 09):** ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ನಿಡ್ಲೆಯಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ 25 ಬ್ಯಾಗ್ ಸಿಮೆಂಟ್ ನ ಬಾಬ್ತು ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಪದ್ಮನಾಭ ಪಿ ರವರು ಸೇವಾಭಾರತಿ ಕಾರ್ಯದರ್ಶಿ ಶ್ರೀ ಬಾಲಕೃಷ್ಣ, ಟ್ರಸ್ಟಿ ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ ಹಾಗೂ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್ ಎಸ್ ರವರಿಗೆ ಹಸ್ತಾಂತರಿಸಿದರು.

## ಕನ್ಯಾಡಿ ಸೇವಾನಿಕೇತನಕ್ಕೆ ಭೋರುಕಾ ಪವರ್ ಕಾರ್ಪೊರೇಷನ್ ಲಿಮಿಟೆಡ್‌ನ ಭೇಟಿ



**ಕನ್ಯಾಡಿ (ಫೆ. 20):** ಭೋರುಕಾ ಪವರ್ ಕಾರ್ಪೊರೇಷನ್ ಲಿಮಿಟೆಡ್‌ನ ಉಪಾಧ್ಯಕ್ಷರ ಶ್ರೀ ಬಿ ರವಿಚಂದ್ರನ್ , ಸೀನಿಯರ್ ಡಿಜಿಎಂ ಶ್ರೀ ಗುರುರಾಜ್ ಕುಲಕರ್ಣಿ, ಸೀನಿಯರ್ ಮ್ಯಾನೇಜರ್ ಶ್ರೀ ಗಣೇಶ್ ಶೆಟ್ಟಿ, ಅಸಿಸ್ಟೆಂಟ್ ಮ್ಯಾನೇಜರ್ ಶ್ರೀಹರಿಯವರು ಫೆಬ್ರವರಿ 20 ರಂದು ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿದರು.

ನೂತನ ಕಟ್ಟಡವನ್ನು ವೀಕ್ಷಿಸಿದ ನಂತರ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ತಿಳಿದು ಸಂತೋಷ ವ್ಯಕ್ತಪಡಿಸಿದರು. ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ಸಹಕರಿಸುವಂತೆ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ಪ್ರಗತಿಪರ ಕೃಷಿಕರು ಮತ್ತು ಸಮಾಜ ಸೇವಕರಾದ ಶ್ರೀ ಗ್ರೇಸಿಯನ್ ವೇಗಸ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸೇವಾಧಾಮಕ್ಕೆ ಬೆಂಗಳೂರಿನ ಕೆಮ್ ಟ್ರೆಂಡ್ ಕಂಪೆನಿಯಿಂದ ಭೇಟಿ





**ಕನ್ಯಾಡಿ (ಫೆ. 01):** ಬೆಂಗಳೂರಿನ ಕೆಮ್ ಟ್ರೆಂಡ್ ಕೆಮಿಕಲ್ಸ್ ಕಂಪನಿ ಪ್ರೈವೇಟ್ ಲಿಮಿಟೆಡ್‌ನ ತಂಡವು ಫೆಬ್ರವರಿ 01 ರಂದು ಕನ್ಯಾಡಿ ಸೇವಾನಿಕೇತನದ ನೂತನ ಕಾರ್ಯಾಲಯ ಮತ್ತು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ, ಸೇವಾಧಾಮಕ್ಕೆ ಭೇಟಿ ನೀಡಿದರು. ನೂತನ ಕಟ್ಟಡವನ್ನು ವೀಕ್ಷಿಸಿದ ನಂತರ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ತಿಳಿದು ಸಂತೋಷ ವ್ಯಕ್ತಪಡಿಸಿದರು.

ನಿರಂತರವಾಗಿ ಸೇವಾಭಾರತಿ ಸಂಸ್ಥೆಗೆ CSR ಅನುದಾನವನ್ನು ಒದಗಿಸುತ್ತಿರುವುದಕ್ಕಾಗಿ ಸಂಸ್ಥೆಯ ಪರವಾಗಿ ಧನ್ಯವಾದಗಳನ್ನು ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ಸೇವಾಭಾರತಿಯ ಟ್ರಸ್ಟಿ ಶ್ರೀ ಜೈ ರಾಜ್ ಸಾಲ್ಯಾನ್ ಕಾನರ್ಪ ಹಾಗೂ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ. ರವರು ಉಪಸ್ಥಿತರಿದ್ದರು.

## ಕೊಕ್ಕಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ(ನಿ.), ದಿಂದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ. 25,000/- ದೇಣಿಗೆ.



**ಕೊಕ್ಕಡ (ಫೆ. 16):** ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ವತಿಯಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ 63 ಬ್ಯಾಗ್ ಸಿಮೆಂಟ್ ನ ಬಾಬ್ತು ರೂ. 25,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸಂಘದ ಅಧ್ಯಕ್ಷರಾದ ಶ್ರೀ ಕುಶಾಲಪ್ಪ ಗೌಡ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ನವೀನ್ ಹಾಗೂ ಕೊಕ್ಕಡದ ಶ್ರೀ ಈಶ್ವರ್ ಭಟ್ ಹಿತ್ತಿಲು ರವರು ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಸೇವಾಭಾರತಿ ಟ್ರಸ್ಟಿ ಶ್ರೀ ಜೈ ರಾಜ್ ಸಾಲ್ಯಾನ್ ಕಾನರ್ಪ, ದಕ್ಷಿಣ ಕನ್ನಡ ಹಾಗೂ ಕೊಡಗು ಕ್ಷೇತ್ರ ಸಂಯೋಜಕರಾದ ಶ್ರೀ ಕುಸುಮಾಧರ್ ರವರಿಗೆ ದೇಣಿಗೆಯನ್ನು ಹಸ್ತಾಂತರಿಸಿದರು. ಸಂಸ್ಥೆಯ ಪರವಾಗಿ ಧನ್ಯವಾದ ಸಲ್ಲಿಸಲಾಯಿತು.

## ಕೊಕ್ಕಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಸಿಬ್ಬಂದಿ ವರ್ಗದವರಿಂದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ. 10,000/- ದೇಣಿಗೆ.



**ಕೊಕ್ಕಡ (ಫೆ. 16):** ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಸಿಬ್ಬಂದಿ ವರ್ಗದವರು ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸಂಘದ ಅಧ್ಯಕ್ಷರಾದ ಶ್ರೀ ಕುಶಾಲಪ್ಪ ಗೌಡ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ನವೀನ್ ಹಾಗೂ ಸಿಬ್ಬಂದಿ ವರ್ಗದವರು ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಸೇವಾಭಾರತಿ ಟ್ರಸ್ಟಿ ಶ್ರೀ ಜೈ ರಾಜ್ ಸಾಲ್ಯಾನ್ ಕಾನರ್ಪ, ದಕ್ಷಿಣ ಕನ್ನಡ ಹಾಗೂ ಕೊಡಗು ಕ್ಷೇತ್ರ ಸಂಯೋಜಕರಾದ ಶ್ರೀ ಕುಸುಮಾಧರ್ ರವರಿಗೆ ದೇಣಿಗೆಯನ್ನು ಹಸ್ತಾಂತರಿಸಿದರು. ಸಂಸ್ಥೆಯ ಪರವಾಗಿ ಧನ್ಯವಾದ ಸಲ್ಲಿಸಲಾಯಿತು.

### ಫೆಬ್ರವರಿ ತಿಂಗಳ ಸೇವಾ ಕಾರ್ಯಗಳು:

- **ಸೆಲ್ಫ್ ಕೇರ್ ಕಿಟ್** - 18
- **ಮೆಡಿಕಲ್ ಕಿಟ್** - 08
- **ಹೊಸ ಗುರುತಿಸುವಿಕೆ** - 05
- **ಕೇಂದ್ರದಲ್ಲಿ ಪುನಶ್ಚೇತನ ಪಡೆದುಕೊಳ್ಳುತ್ತಿರುವ ಸನಿವಾಸಿಗಳು** - 10

## ಡಾ. ವೆಂಕಟೇಶ್ ಹಾಗೂ ಡಾ. ಕೆ. ಪಿ. ನಂಬಿಯಾರ್ ಬೈಂದೂರು ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಭೇಟಿ




**ಬೈಂದೂರು (ಫೆ.26):** ಸೇವಾಧಾಮ ಒತ್ತಡ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರಕ್ಕೆ ಡಾ. ವೆಂಕಟೇಶ್ ಹಾಗೂ ಡಾ. ಕೆ. ಪಿ. ನಂಬಿಯಾರ್ ರವರು ಫೆಬ್ರವರಿ 26 ರಂದು ಭೇಟಿ ನೀಡಿದರು.

ಭೇಟಿಯ ಸಂದರ್ಭದಲ್ಲಿ ಕೇಂದ್ರದ ಸನಿವಾಸಿಗಳಿಗೆ ಉಚಿತ ಕ್ಯಾಥೆಟರೈಜೇಶನ್ ಸೇವೆಗಳನ್ನು ನೀಡುವುದರ ಜೊತೆಗೆ, ಅತ್ಯವಶ್ಯಕ ವೈದ್ಯಕೀಯ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಿದರು. ಬೆನ್ನುಹುರಿ ಗಾಯದಿಂದ ಬಳಲುತ್ತಿರುವ ವ್ಯಕ್ತಿಗಳ ಆರೋಗ್ಯ ಮತ್ತು ಪುನಶ್ಚೇತನಕ್ಕಾಗಿ ಅವರು ತೋರಿದ ಕರುಣೆ, ನಿಸ್ವಾರ್ಥ ಸೇವಾಭಾವಕ್ಕೆ ಸೇವಾಧಾಮದ ವತಿಯಿಂದ ಹೃತ್ಪೂರ್ವಕವಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸಲಾಯಿತು.

ಈ ಸಂದರ್ಭದಲ್ಲಿ ಸೇವಾಭಾರತಿ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ಹಾಗೂ ಫಿಸಿಯೋಥೆರಪಿಸ್ಟ್ ಕು. ವಿಖ್ಯಾತಿ, ಉಪಸ್ಥಿತರಿದ್ದರು.

## ಅಡ್ಯನಡ್ಕ ಅಮೃತಧಾರ ಕೇಂದ್ರಕ್ಕೆ ಕನ್ಯಾಡಿ ಸೇವಾಭಾರತಿ ತಂಡ ಭೇಟಿ




## ಬೈಂದೂರು ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ವೈದ್ಯರ ತಂಡದ ಭೇಟಿ






**ಬೈಂದೂರು(ಫೆ. 25 ):** ಸೇವಾಧಾಮ ಒತ್ತಡ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರಕ್ಕೆ ಮಂದಾರ ಕ್ಲಿನಿಕ್‌ನ ಜನರಲ್ ಪ್ರ್ಯಾಕ್ಟೀಷನರ್ ಡಾ. ಎ. ಎಸ್. ಉಡುಪ, ಅಮಾವಸೆಬೈಲು ಗ್ರಾಮದ ಡಾ. ಮಂದ್ರ ಶೆಟ್ಟಿ, ಹಾಗೂ ಡಾ. ಕೆ. ಪಿ. ನಂಬಿಯಾರ್ ರವರು ಫೆಬ್ರವರಿ 25 ರಂದು ಭೇಟಿ ನೀಡಿದರು.

ಭೇಟಿಯ ಸಂದರ್ಭದಲ್ಲಿ ವೈದ್ಯರು ಕೇಂದ್ರದ ಸನಿವಾಸಿಗಳ ಜೊತೆ ಸಂವಹನ ನಡೆಸಿ, ಅವರ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸಿದರು ಮತ್ತು ಅಗತ್ಯವಾದ ವೈದ್ಯಕೀಯ ಸಲಹೆ ಹಾಗೂ ಮಾರ್ಗದರ್ಶನ ನೀಡಿದರು. ಹಾಗೆಯೇ ಸೇವಾಧಾಮ ನಡೆಸುತ್ತಿರುವ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಸನಿವಾಸಿಗಳಿಗೆ ತಿಂಗಳಿಗೊಮ್ಮೆ ವೈದ್ಯಕೀಯ ಸಮಾಲೋಚನೆ ಹಾಗೂ ರಕ್ತ ಮತ್ತು ಮೂತ್ರ ಪರೀಕ್ಷೆಗಳನ್ನು ನಡೆಸುವುದರ ಕುರಿತು ಚರ್ಚೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಸೇವಾಭಾರತಿ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ, ಫಿಸಿಯೋಥೆರಪಿಸ್ಟ್ ಕು. ವಿಖ್ಯಾತಿ, ಉಡುಪಿ ಕ್ಷೇತ್ರ ಸಂಯೋಜಕರಾದ ಶ್ರೀ ಮನೋಜ್ ಉಪಸ್ಥಿತರಿದ್ದರು.

**ಅಡ್ಯನಡ್ಕ (ಫೆ. 25 ):** ಅಡ್ಯನಡ್ಕ ಅಮೃತಧಾರ ಸಂಸ್ಥೆಯ ಎಕ್ಯೂಎಂಡಿ ಡಾ. ಗೋಪಾಲಕೃಷ್ಣ ಭಟ್ ರವರನ್ನು ಸೇವಾಭಾರತಿ ತಂಡ ಫೆ. 25 ರಂದು ಭೇಟಿ ಮಾಡಲಾಯಿತು.

ಭೇಟಿಯ ಸಂದರ್ಭದಲ್ಲಿ ತಂಡವು ಅವರೊಂದಿಗೆ ಸಭೆ ನಡೆಸಿ, ಸೇವಾಭಾರತಿ–ಸೇವಾಧಾಮದ ವಿವಿಧ ಕಾರ್ಯ ಚಟುವಟಿಕೆಗಳ ಬಗ್ಗೆ ಹಾಗೂ ಸೇವಾಭಾರತಿಯ ವಿಸ್ತೃತ ಯೋಜನೆಗಳ ಕುರಿತು ಸವಿಸ್ತಾರ ಚರ್ಚೆಯನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಸೇವಾಧಾಮದ ಅಧ್ಯಕ್ಷರಾದ ಶ್ರೀ ಕೆ. ವಿನಾಯಕರಾವ್, ಉಪಾಧ್ಯಕ್ಷರಾದ ಶ್ರೀ ಬಾಲಕೃಷ್ಣ, ಖಜಾಂಚಿ ಶ್ರೀ ಎ ಕೆ. ಜೈ ರಾಜ್ ಸಾಲಿಯಾನ್ ಕಾನರ್ಪ, ಅನುಸರಣೆ ಹಾಗೂ ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್ ಎಸ್., ಮತ್ತು ಸ್ವಯಂಸೇವಕರಾದ ಶ್ರೀ ಜಯರಾಜ್ ಗೌಡ ರವರು ಉಪಸ್ಥಿತರಿದ್ದರು.

## ಮಹನೀಯ ದಾನಿಗಳು

- ಶ್ರೀ ಬಾಬು ಎಂ ಕೆ, ಜೋಡುಸ್ಥಾನ
- ಶ್ರೀ ಕಾರ್ತಿಕ್ ಗೌಡ, ಸುಳ್ಯ
- ಶ್ರೀ ಸುರೇಶ್ ರಾವ್ ಯು ಬಿ, ಉಡುಪಿ
- ಶ್ರೀಮತಿ ಶ್ರೀದೇವಿ, ಅಳದಂಗಡಿ
- ಡಾ. ಸ್ತುತಿ, ಧರ್ಮಸ್ಥಳ
- ಶ್ರೀ ದೇವರಾಜ ಎನ್,ಬೆಂಗಳೂರು
- ಶ್ರೀ ನಿಶಾಂತ್ ಪಿ, ನಿಡ್ಲೆ
- ಶ್ರೀ ಅಜಿತ್ ಕುಮಾರ್
- ಶ್ರೀಮತಿ ವಿಜಯ ಪಿ, ಪುತ್ತೂರು
- ಶ್ರೀಮತಿ ಉಷಾ ನಾಯ್ಕ್, ಬೆಳ್ತಂಗಡಿ
- ಶ್ರೀಮತಿ ಶಾಂತಾ ಕುಮಾರಿ ಬಿ, ಉಜಿರೆ
- ಶ್ರೀ ಬಾಲಸುಬ್ರಮಣ್ಯ ಭಟ್ ಅಂಡ್ ಶ್ರೀಮತಿ ಅಶ್ವಿನಿ ಕೆ ಎಂ, ನಿರ್ಚಲ್
- ಶ್ರೀ ರವಿ ಪಿ ಎನ್, ಗುರುವಾಯನಕೆರೆ
- ಶ್ರೀಮತಿ ಸಾವಿತ್ರಿ ಜೇಷ್ಠಕುಮಾರ್, ಕನ್ಯಾಡಿ
- ಸಿಬ್ಬಂದಿವರ್ಗ, ಕೊಕ್ಕಡ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ (ನಿ.), ಕೊಕ್ಕಡ
- ಶ್ರೀಮತಿ ಲಲಿತಾ ಕೆ, ಉಜಿರೆ
- ಶ್ರೀ ನಿತೀಶ್, ಪುತ್ತೂರು
- ಶ್ರೀ ಕೆ ಕುಶಾಲಪ್ಪ ಗೌಡ ಪೂವಾಜೆ, ಕೊಕ್ಕಡ
- ಶ್ರೀಮತಿ ಮೀನಾಕ್ಷಿ ಜಿ ಭಟ್, ಜೋಡುಸ್ಥಾನ
- ಶ್ರೀ ಈಶ್ವರ ಭಟ್ ಹಿತ್ತಿಲು, ಕೊಕ್ಕಡ
- ಶ್ರೀ ರವಿಚಂದರ್, ಬೆಂಗಳೂರು
- ಶ್ರೀ ವಿನಯಚಂದ್ರ ಕೆ, ಉಜಿರೆ
- ಶ್ರೀ ದಿನಕರ ಕೆ, ಕೊಕ್ಕಡ
- ಶ್ರೀಮತಿ ಶಾಂತಾ ಪಿ ಶೆಟ್ಟಿ, ನೇತ್ರಾವತಿ
- ಶ್ರೀಮತಿ ವಿಶಾಲ ಕುಮಾರಿ, ಬೆಂಗಳೂರು
- ಶ್ರೀ ನಾರಾಯಣ ಗೌಡ, ಕಲ್ಮಂಜ
- ಶ್ರೀ ಕೇತನ್ ಪ್ರಧಾನ್, ಮುಂಬೈ
- ಶ್ರೀಮತಿ ಚಂದನ್ ಅಮಿತ್ ಚವಾಣ್, ಮುಂಬೈ
- ಶ್ರೀಮತಿ ಪದ್ಮಾವತಿ, ಕನ್ಯಾಡಿ
- ಶ್ರೀ ನಾಗೇಶ್ ಎ, ಬೆಂಗಳೂರು
- ಶ್ರೀ ಸುರೇಂದ್ರ ಕುಡ್ವ, ಉಜಿರೆ
- ಶ್ರೀ ಪಣಂಬೂರ್ ಬಾಲಕೃಷ್ಣ ರಾವ್, ಬೆಂಗಳೂರು

## ಸೇವಾನಿಧಿ ದಾನಿಗಳು

- ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
- ಶ್ರೀ ಗಣೇಶ್ ಭಟ್, ಉಜಿರೆ
- ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
- ಶ್ರೀ ಪುರುಷೋತ್ತಮ್ ಡಿ ಎ, ಧರ್ಮಸ್ಥಳ
- ಶ್ರೀ ಕೆ ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
- ಶ್ರೀ ಮಧುಸೂದನ್, ಉಜಿರೆ
- ಶ್ರೀ ಶಿವಕುಮಾರ್, ಉಜಿರೆ
- ಶ್ರೀ ಬಾಲಕೃಷ್ಣ ರಾವ್, ಕನ್ಯಾಡಿ
- ಶ್ರೀ ಅಣ್ಣು ದೇವಾಡಿಗ, ನೇತ್ರವತಿ
- ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
- ಶ್ರೀ ಸುನಿಲ್ ಕುಮಾರ್ ಜೈನ್, ಕನ್ಯಾಡಿ
- ಶ್ರೀ ಗೌರಿಶಂಕರ್ ರಾವ್, ಧರ್ಮಸ್ಥಳ
- ಶ್ರೀ ಕೆ ವಿನಾಯಕ್ ರಾವ್, ಕನ್ಯಾಡಿ
- ಬೇಬಿ ವಿಹಾನ ಎಂ ಎಂ, ನಿಡ್ಲೆ
- ಶ್ರೀ ನೀಲಪ್ಪ, ಕನ್ಯಾಡಿ
- ಶ್ರೀ ಜಿ ಪುಟ್ಟಸ್ವಾಮಿ, ಉಜಿರೆ
- ಬೇಬಿ ಶ್ರೀ ಬಿಲ್ವಾನಿ, ಉಜಿರೆ
- ಶ್ರೀ ಸಂತೋಷ್ ಕೆ, ಕೊಕ್ಕಡ
- ಶ್ರೀ ಬಿ ಪುರಂದರ, ನಾರ್ಯ
- ಶ್ರೀ ಅಖಿಲೇಶ್ ಕೆ ಎಲ್, ಪುತ್ತೂರು
- ಶ್ರೀ ಜಯಾನಂದ ಮಲಯಾಳ, ಕನ್ಯಾಡಿ
- ಶ್ರೀ ರಜತ್ ಕುಮಾರ್ ಜೆ ಡಿ, ವೇಣೂರು
- ಶ್ರೀ ಸುಧಾಕರ್ ಪ್ರಭು, ಉಡುಪಿ
- ಶ್ರೀ ಸಂಪತ್ ರಾವ್, ಉಡುಪಿ
- ಶ್ರೀ ವಿಕ್ರಾಂತ್, ಉಜಿರೆ
- ಶ್ರೀ ಕೆ ಪುರಂದರ ರಾವ್, ಸೃಷ್ಟಿ
- ಶ್ರೀ ಕೃಷ್ಣಮೂರ್ತಿ ರಾವ್, ಕನ್ಯಾಡಿ
- ಶ್ರೀ ದಿವಾಕರ್ ರಾವ್, ಕನ್ಯಾಡಿ
- ಶ್ರೀಮತಿ ಸವಿತಾ ಎಮ್ ರಾವ್, ಕನ್ಯಾಡಿ
- ಶ್ರೀ ರಮೇಶ್ ಪ್ರಭು, ಉಜಿರೆ
- ಶ್ರೀಮತಿ ಜಯಂತಿ ಪುರಂದರ ರಾವ್, ಸೃಷ್ಟಿ
- ಶ್ರೀಕೆ ಸೂರ್ಯನಾರಾಯಣ ರಾವ್, ದೊಂಡೋಲೆ
- ಶ್ರೀಮತಿ ರವಿಜಾ ರಾವ್, ಕನ್ಯಾಡಿ
- ಶ್ರೀ ನಿತಿನ್, ಉಜಿರೆ
- ಶ್ರೀ ಜಿ ರಾಘವೇಂದ್ರ, ತೇಜಾ, ತೆಲಂಗಾಣ
- ಶ್ರೀ ಕೆ ರಮೇಶ್ ಪೂಜಾರಿ, ಕನ್ಯಾಡಿ
- ಶ್ರೀ ನೀಲಕಂಠ, ಧರ್ಮಸ್ಥಳ
- ಶ್ರೀ ಬಿ ರಾಮದಾಸ್ ಭಂಡಾರ್ಕರ್, ಉಜಿರೆ
- ಶ್ರೀ ಲಕ್ಷ್ಮೀನಾರಾಯಣ ರಾವ್,ಜೋಡುಸ್ಥಾನ
- ಶ್ರೀ ವಿಘ್ನೇಶ್ ಕುಡ್ವ, ಉಜಿರೆ
- ಶ್ರೀ ಪ್ರಜ್ವಲ್, ದೊಂಡೋಲೆ
- ಶ್ರೀ ಭುವನೇಶ್, ಉಜಿರೆ
- ಶ್ರೀ ಲೋಕೇಶ್ ಪಿ, ಬೆಂಗಳೂರು

## ಸಂಘ ಸಂಸ್ಥೆಗಳು

- ಶ್ರೀ ಶಾರದೋತ್ಸವ ಸಮಿತಿ, ಕನ್ಯಾಡಿ
- ಕೆಮ್ ಟ್ರೆಂಡ್ ಕೆಮಿಕಲ್ಸ್ ಕಂಪನಿ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
- ಶ್ರೀ ನಿತ್ಯನೂತನ ಭಜನಾ ಮಂಡಳಿ, ಜೋಡುಸ್ಥಾನ
- ಕೊಕ್ಕಡ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ (ನಿ.), ಕೊಕ್ಕಡ
- ನಿಡ್ಲೆ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ (ನಿ.), ನಿಡ್ಲೆ
- ಶ್ರೀ ಸುಬ್ರಮಣ್ಯ ಸ್ಥಾನಿಕ ಬ್ರಾಹ್ಮಣರ ಸಭಾ (ರಿ), ಉಜಿರೆ
- ಗೋವರ್ಧನಗಿರಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್, ಮಂಗಳೂರು

## ವಸ್ತು ರೂಪದಲ್ಲಿ ದೇಣಿಗೆ

- ಉಜಿರೆ ಹವ್ಯಕ ವಲಯ, ಉಜಿರೆ
- ಶ್ರೀ ಚಂದ್ರಶೇಖರ್, ಉಜಿರೆ
- ಶ್ರೀಮತಿ ಮೀನಾಕ್ಷಿ ಜಿ ಭಟ್, ಜೋಡುಸ್ಥಾನ

# ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ಸತ್ಯನಾರಾಯಣ ಭಟ್ ಆದ ನಾನು ಸೇವಾಭಾರತಿಗೆ ಹೃದಯಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನನಗೆ ಈ ಸೇವಾಧಾಮದಲ್ಲಿ ಅತಿ ಉತ್ತಮವಾದ ದೈಹಿಕ ಶಿಕ್ಷಣ ಹಾಗೂ ಮಾನಸಿಕ ನೆಮ್ಮದಿಯ ವಿಚಾರಗಳ ಬಗ್ಗೆ ಉತ್ತಮವಾಗಿ ಸಲಹೆ ಮತ್ತು ಸಹಾಯಗಳೊಂದಿಗೆ ನನ್ನಲ್ಲಿಯೇ ಮಾಡುವಂತೆ ಹುರಿದುಂಬಿಸಿದ್ದಾರೆ. ಹಾಗೂ ಎಲ್ಲ ಸಿಬ್ಬಂದಿ ವರ್ಗದವರಿಗೆ ಹಾಗೂ ಆಡಳಿತ ವ್ಯವಸ್ಥೆಗೆ ನನ್ನ ಹೃದಯಪೂರ್ವಕ ಧನ್ಯವಾದಗಳು. ನನ್ನ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸ ಆದಕಾರಣ ನಾನು ಮುಂಚಿತವಾಗಿ ಈ ಸಂಸ್ಥೆಯಿಂದ ಹೊರಡಲು ನಿರ್ಧರಿಸಿದ್ದೇನೆ. ನನ್ನ ಸಮಸ್ಯೆಗಳಿಗೆ ಸೂಕ್ತ ಚಿಕಿತ್ಸೆಯನ್ನು ಪಡೆದುಕೊಂಡು ಮರಳಿ ಈ ಸಂಸ್ಥೆಗೆ ಬರುತ್ತೇನೆ. ನನ್ನ ಸ್ವ ಪ್ರಯತ್ನದಿಂದ ನನ್ನ ಕೆಲಸವನ್ನು ನಾನು ಮಾಡಿಕೊಳ್ಳುವಂತಾಗಲು ಬಯಸುತ್ತೇನೆ. ಹಾಗೂ ನನ್ನ ಆರೋಗ್ಯ ಚೇತರಿಕೆಯಾದ ನಂತರ ನನಗೆ ಮತ್ತೊಮ್ಮೆ ಇಲ್ಲಿ ತರಬೇತಿಯನ್ನು ಕಲಿಯಲು ಅವಕಾಶ ನೀಡಬೇಕೆಂದು ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ ಸರ್ವರಿಗೂ ಶುಭವಾಗಲಿ ಮತ್ತು ಈ ಸಂಸ್ಥೆ ಇನ್ನಷ್ಟು ಬೆಳೆಯಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

**ಇತಿ ತಮ್ಮ ವಿಶ್ವಾಸಿ**
**ಸತ್ಯನಾರಾಯಣ ಭಟ್**

## ಕನ್ಯಾಡಿ ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ನೀಡಿದ ನವ ಜೋಡಿಗಳು



**ಧರ್ಮಸ್ಥಳ (ಜ. 08):** ಶ್ರೀ ರತ್ನವರ್ಮ ಜೈನ್ ಹಾಗೂ ಶ್ರೀಮತಿ ಹರ್ಷಿಣಿ ರವರ ಮಗಳಾದ ಡಾ. ಸ್ತುತಿ ಮತ್ತು ಸಿ ಎ ದ್ವಿಶಾನ್ ಜೈನ್ ರವರ ಶುಭವಿವಾಹದ ಸಂದರ್ಭದಲ್ಲಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 50,000 ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣ ಗೌರಿ ಹಾಗೂ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್ ಎಸ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ. ನವ ವಧುವರರಿಗೆ ಶುಭಹಾರೈಸಿ, ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

## ನೇತ್ರಾವತಿಯ ಶ್ರೀಮತಿ ಶಾಂತಾ ಪಿ ಶೆಟ್ಟಿ ಯವರಿಂದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ. 10,000/- ದೇಣಿಗೆ.



**ಕನ್ಯಾಡಿ (ಫೆ. 20):** ನೇತ್ರಾವತಿಯ ಶ್ರೀಮತಿ ಶಾಂತ ಪಿ ಶೆಟ್ಟಿ ಯವರಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಹಾಗೂ ಸಿಬ್ಬಂದಿ ವರ್ಗದವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಧರ್ಮಸ್ಥಳದ ದಿ| ಗೋಪಾಲಕೃಷ್ಣ ಬಿ ರವರ ಸ್ಮರಣಾರ್ಥವಾಗಿ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ದೇಣಿಗೆ:



**ಕನ್ಯಾಡಿ (ಫೆ. 20):** ಧರ್ಮಸ್ಥಳ ಗ್ರಾಮದ ಜೋಡುಸ್ತಾನ ನಿವಾಸಿಯಾಗಿರುವ ಶ್ರೀಮತಿ ಮೀನಾಕ್ಷಿ ಜಿ ಭಟ್ ಹಾಗೂ ಅವರ ಅಳಿಯ ಶ್ರೀ ಸುರೇಶ್ ಭಟ್ ರವರು ಕನ್ಯಾಡಿ ಸೇವಾನಿಕೇತನಕ್ಕೆ ಫೆಬ್ರವರಿ 20 ರಂದು ಭೇಟಿ ನೀಡಿದರು.

ದಿ| ಗೋಪಾಲಕೃಷ್ಣ ಬಿ ರವರ ಸ್ಮರಣಾರ್ಥವಾಗಿ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂ.2000/- ದೇಣಿಗೆಯನ್ನು ಮತ್ತು 20 ಕೆ.ಜಿ ಕುಚ್ಚಲಕ್ಕಿಯನ್ನು ನೀಡಿ ಸಹಕರಿಸಿದ್ದಾರೆ.

ಈ ಸಂದರ್ಭದಲ್ಲಿ ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಕೊಕ್ಕಡದ ಶ್ರೀ ದಿನಕರ ಕೆ ರವರಿಂದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ. 10,000/- ದೇಣಿಗೆ



**ಕನ್ಯಾಡಿ (ಫೆ. 21):** ಕೊಕ್ಕಡದ ಶ್ರೀ ದಿನಕರ ಕೆ ಹಾಗೂ ಶ್ರೀಮತಿ ಜ್ಯೋತಿ ದಿನಕರ್ ರವರು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಸಮಾಜಕ್ಕೆ ಮಾದರಿಯಾಗುವಂತೆ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸಂಸ್ಥೆಯ ಅಧ್ಯಕ್ಷರಾದ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಶುಭ ಹಾರೈಸಿದರು.

## ಸೇವಾಧಾಮ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ಧನಸಹಾಯ ನೀಡುವಂತೆ ಮನವಿ





**ಮೊದಲ ಮಹಡಿಯ ಕಾಮಗಾರಿ ಪ್ರಾರಂಭಗೊಂಡಿದ್ದು, ಪಿಲ್ಲರ್ ಹಾಗೂ ಸ್ಲಾಬ್ ಕಾಮಗಾರಿ ಪೂರ್ಣಗೊಂಡಿದೆ. ಎರಡನೇ ಮಹಡಿಯ ಕೆಲಸ ಪ್ರಾರಂಭಗೊಂಡು ಇದುವರೆಗೆ ಒಟ್ಟು ರೂ. 1,98,74,352/- ವೆಚ್ಚವಾಗಿದ್ದು, ಇನ್ನೂ ಮೂರು ಮಹಡಿಗಳ ಕಾಮಗಾರಿ ಪೂರ್ಣಗೊಳ್ಳಬೇಕಿದೆ. ಮುಂದಿನ ಹಂತದ ಕಾಮಗಾರಿ ಮುಂದುವರಿಸಲು ನಿಧಿಯ ಅವಶ್ಯಕತೆ ಇದ್ದು ದಾನಿಗಳ ಸಹಕಾರದ ನಿರೀಕ್ಷೆಯಲ್ಲಿ ನಾವಿದ್ದೇವೆ.**

ಸೇವಾಭಾರತಿ ಸಂಸ್ಥೆಯು ಕಳೆದ 21 ವರ್ಷಗಳಲ್ಲಿ ಸಾಮಾಜಿಕವಾಗಿ ಅನೇಕ ಕ್ಷೇತ್ರಗಳಲ್ಲಿ ಸೇವಾ ಕಾರ್ಯಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲಿಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆ ಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ವೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. 2025 ರಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ನೆಲಮಹಡಿಗೆ Mangalore Refinery and Petrochemicals Limited (MRPL) ನಿಂದ ರೂ. 42 ಲಕ್ಷ ಮಂಜೂರಾಗಿದ್ದು ಅದರಲ್ಲಿ ನೆಲಮಹಡಿಯ ಕಟ್ಟಡದ ನಿರ್ಮಾಣ ಸಂಪೂರ್ಣವಾಗಿ ಪೂರ್ಣಗೊಂಡು ಉದ್ಘಾಟನೆ ಆಗಿದೆ., ಹಾಗೂ NMPA CSR ಅನುದಾನದ ಅಡಿಯಲ್ಲಿ ಮೊದಲ ಮಹಡಿಯ ಪಿಲ್ಲರ್ ಹಾಗೂ ಸ್ಲ್ಯಾಬ್ ಕಾಮಗಾರಿ ಸಂಪೂರ್ಣವಾಗಿ ಪೂರ್ಣಗೊಂಡಿದ್ದು. ಪ್ರಸ್ತುತ ಇದೀಗ, ಎರಡನೇ ಮಹಡಿಯ ಕಾಮಗಾರಿ ಪ್ರಾರಂಭವಾಗಿದೆ.

ಬೇರೆ ಬೇರೆ CSR, ದಾನಿಗಳಿಗೆ, ಸಂಘ ಸಂಸ್ಥೆಗಳಿಗೆ ಸಹಕಾರವನ್ನು ಅಪೇಕ್ಷಿಸುತಿದ್ದೇವೆ. ನಿಯೋಜಿತ ಕಟ್ಟಡದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಉತ್ತಮ ಪುನಶ್ಚೇತನಕಾಗಿ ಫಿಸಿಯೋಥೆರಪಿ ವಾರ್ಡ್ ಕೇಂದ್ರಾಧಾರಿತ ಸೇವೆಗಾಗಿ ವಸತಿ (12 ಮಂದಿ ಮತ್ತು ಆರೈಕೆದಾರರಿಗೆ ಉಳಿಯುವಂತ ವ್ಯವಸ್ಥೆ), ಅಡುಗೆ ಮತ್ತು ಊಟದ ಹಾಲ್ ದಿವ್ಯಾಂಗರಿಗೆ ಅನೇಕ ರೀತಿಯ ತರಬೇತಿ ವೈದ್ಯಕೀಯ ತಪಾಸಣೆಗಾಗಿ ಬಹು ಉದ್ದೇಶಿತ ಸಭಾಂಗಣ ಮತ್ತು ಪ್ರಧಾನ ಕಚೇರಿ ಹೊಂದಿರುವ ಈ ಕಟ್ಟಡ ಸಂಪೂರ್ಣ ದಿವ್ಯಾಂಗ ಸ್ನೇಹಿಯಾಗಿ ನಿರ್ಮಾಣವಾಗಲಿದೆ. ಈ ಕಟ್ಟಡ ಪೂರ್ತಿ ನಿರ್ಮಾಣವಾದಲ್ಲಿ ಕರ್ನಾಟಕದಾದ್ಯಂತ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಉತ್ತಮ ಸೇವೆಯನ್ನು ನೀಡುವ ಪುನಶ್ಚೇತನ ಕೇಂದ್ರವಾಗುತ್ತದೆ.

ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿ-ಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

### BANK ACCOUNT DETAILS


SEVABHARATHI REGD

**Scan and Pay also**

| | | |
|---|---|---|
| A/c Holder | - | M/s. Sevabharathi(R) |
| A/c No | - | 120000400920 |
| Account Type | - | Current Account, Canara Bank Dharmasthala Branch |
| IFS Code | - | CNRB0010246 |

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

**ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.**



**ಶ್ರೀ ಪಿ ಎನ್ ನಾರಾಯಣ ಭಟ್**, ಪರಕ್ಕಜೆ




**ಮಾಸ್ಟರ್। ಅಖ್ಯಾನ್ ಶೆಟ್ಟಿ,** ಕುಂದಾಪುರ



**ಶ್ರೀ ದೇವರಾಜ್ ಎನ್,** ಬೆಂಗಳೂರು



**ಶ್ರೀ ಚರಣ್ ಕುಮಾರ್ ಎಂ,** ಪುತ್ತೂರು



**ಶ್ರೀ ಕೇತನ್ ಪ್ರಧಾನ್,** ಮುಂಬೈ



**ಬೇಬಿ। ಶ್ರೀಯಾನ್ ಎನ್ ಪಿ** ಪರಹಿತ್ತಿಲು



**ಕು। ಕೃತಿಕಾ ಪೂಜಾರಿ** ಬಂಟ್ವಾಳ



**ಶ್ರೀ ಸುನೀಲ್ ಕುಮಾರ್ ಜೈನ್,** ಕನ್ಯಾಡಿ



**ಶ್ರೀ ವಿಗ್ನೇಶ್ ಕುಡುವ,** ಉಜಿರೆ




**ಬೇಬಿ। ವಿಹಾನ್ ಶ್ರೀಯಾ** ಪುತ್ತೂರು



**ಶ್ರೀಮತಿ ವಿಶಾಲ ಕುಮಾರಿ** ಪುತ್ತೂರು



**ಶ್ರೀಮತಿ ಜಯಂತ್ ಪುರಂದರ್,** ಸೃಷ್ಟಿ ನಾರ್ಯ



**ಬೇಬಿ। ಪವನ್ ಕೃಷ್ಣ** ನೀರ್ಚಾಲು




**ಶ್ರೀ ಮಂಜುನಾಥ್ ಡಿ ಎಲ್** ಧರ್ಮಸ್ಥಳ



**ಮಾಸ್ಟರ್। ಮಹಿರಾನ್ಶ್ ಎನ್ ಎಸ್,** ಮಿತ್ತರೋಡಿ




**ಶ್ರೀ ಅಮಿತ್ ಚವಾನ್ ಮತ್ತು ಶ್ರೀಮತಿ ಚಂದನ್ ಅಮಿತ್ ಚವಾನ್,** ಮುಂಬೈ



**ಡಾ। ಗೋಪಾಲಕೃಷ್ಣ ಕೆ ಮತ್ತು ಡಾ ಭಾರತಿ ಜಿ ಕೆ,** ಉಜಿರೆ



**ಡಾ। ಲೋಕೇಶ್ ರಾವ್ ಬಿ ಕೆ ಮತ್ತು ಶ್ರೀಮತಿ ರಮ್ಯಾ,** ಉಡುಪಿ



**ಶ್ರೀ ಕಾರ್ತಿಕ್ ಗೌಡ ಮತ್ತು ಶ್ರೀಮತಿ ಜಸ್ಮಿತಾ ಎಂ ಎಲ್,** ಬರಮೇಲು


## ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು



**ಶ್ರೀ ದಿನಕರ ಕೆ ಮತ್ತು ಶ್ರೀಮತಿ ಜ್ಯೋತಿ ದಿನಕರ,**
ಕೊಕ್ಕಡ




**ಶ್ರೀ ರಾಜ್ ಕುಮಾರ್ ಮತ್ತು ಶ್ರೀಮತಿ ಪ್ರೇಮ**
ಮಂಗಳೂರು



**ಶ್ರೀ ದುಷ್ಯಂತ್**
ಬೆಂಗಳೂರು

## ಪುಣ್ಯಸ್ಮರಣೆ




**ದಿ| ಗೋಪಾಲಕೃಷ್ಣ ಬಿ,**
ಧರ್ಮಸ್ಥಳ



**ದಿ|ದಿನೇಶ್,**
ಕನ್ಯಾಡಿ

# ಬಜಿಲದ ಶ್ರೀ ನಾರಾಯಣ ಗೌಡ ರವರಿಂದ ನೂತನ ಕಟ್ಟಡಕ್ಕೆ ದೇಣಿಗೆ



**ಕನ್ಯಾಡಿ (ಫೆ. 22):** ಧರ್ಮಸ್ಥಳ ಗ್ರಾಮದ ಬಜಿಲದ ನಿವಾಸಿಯಾಗಿರುವ ಶ್ರೀ ನಾರಾಯಣ ಗೌಡ, ಪತ್ನಿ ಶ್ರೀಮತಿ ಡಿಕಮ್ಮ ಹಾಗೂ ಮಗ ಶ್ರೀ ಗಣೇಶ್ ರವರು ಕನ್ಯಾಡಿ ಸೇವಾನಿಕೇತನಕ್ಕೆ ಫೆಬ್ರವರಿ 22 ರಂದು ಭೇಟಿ ನೀಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 20000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಈ ಸಂದರ್ಭದಲ್ಲಿ ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

# ಸೇವಾಧಾಮದಲ್ಲಿ ಹುಟ್ಟುಹಬ್ಬ ಆಚರಣೆ




**ಸೌತಡ್ಕ (ಫೆ. 27):** ಬೆಳ್ತಂಗಡಿ ತಾಲೂಕಿನ ಕೊಕ್ಕಡ ಗ್ರಾಮದ ಶ್ರೀ ಯತೀಶ್ ಶೆಟ್ಟಿಯವರ 35 ನೇ ಹುಟ್ಟುಹಬ್ಬದ ಪ್ರಯುಕ್ತ ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಫೆಬ್ರವರಿ 27 ರಂದು ಭೇಟಿ ನೀಡಿ. ಒಂದು ಹೊತ್ತಿನ ಊಟವನ್ನು ನೀಡಿ ಹುಟ್ಟುಹಬ್ಬವನ್ನು ವಿಶೇಷ ರೀತಿಯಲ್ಲಿ ಆಚರಿಸಿಕೊಂಡಿದ್ದಾರೆ. ಸಿಬ್ಬಂದಿ ವರ್ಗದವರು ಸಂಸ್ಥೆಯ ಪರವಾಗಿ ಶುಭಹಾರೈಸಿ, ಧನ್ಯವಾದವಿತ್ತರು.

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಬೆಳಗ್ಗಿನ ಉಪಹಾರ ಮತ್ತು ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆ

**ಸೌತಡ್ಕ (ಫೆ. 22):** ಕೊಕ್ಕಡದ ಹಿತ್ತಿಲು ಶ್ರೀ ಕೆ. ಕೃಷ್ಣ ಭಟ್ ರವರ ಮೊಮ್ಮಗ ಚಿ. ಭರತಕೃಷ್ಣ ಅವರ 'ಉಪನಯನ' ಪ್ರಯುಕ್ತ ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಬೆಳಗ್ಗಿನ ಉಪಹಾರ ಮತ್ತು ಮಧ್ಯಾಹ್ನದ ಊಟವನ್ನು ನೀಡಿ ಸಹಕರಿಸುತ್ತಾರೆ.

ಶ್ರೀಯುತರ ಸಕುಟುಂಬ ವರ್ಗದವರಿಗೆ ಸೇವಾಭಾರತಿ-ಸೇವಾಧಾಮ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು



## ನಿಮಗಿದು ತಿಳಿದಿರಲಿ

**ಮೂತ್ರ ಮಾರ್ಗದ ಸೋಂಕು (UTI) ಎಂದರೆ ಮೂತ್ರದ ಮಾರ್ಗದಲ್ಲಿ ಬ್ಯಾಕ್ಟೀರಿಯಾ ಸೋಂಕು ಆಗುವುದು**

- ನೀರು ಕಡಿಮೆ ಕುಡಿದರೆ UTI ಆಗುವ ಸಾಧ್ಯತೆ ಹೆಚ್ಚು.
- ಮೂತ್ರ ವಿಸರ್ಜನೆ ವೇಳೆ ಉರಿ ಅಥವಾ ನೋವು UTI ಯ ಸಾಮಾನ್ಯ ಲಕ್ಷಣ.
- ಪದೇಪದೇ ಮೂತ್ರಕ್ಕೆ ಹೋಗಬೇಕು ಅನ್ನಿಸುವುದು ಕೂಡ ಒಂದು ಲಕ್ಷಣ.
- ಮೂತ್ರಕ್ಕೆ ದುರ್ವಾಸನೆ ಬರುತ್ತದೆ.
- ಕೆಲವೊಮ್ಮೆ ಜ್ವರ ಕೂಡ ಬರುತ್ತದೆ.

**ಸ್ಪೈನಲ್ ಕಾರ್ಡ್ ಇಂಜುರಿ ಇರುವವರಿಗೆ**

- ಏಕಾಏಕಿ ಸ್ಪಾಸ್ಟಿಸಿಟಿ ಹೆಚ್ಚಾಗಬಹುದು
- ಆಟೋನಾಮಿಕ್ ಡಿಸ್ರೆಫ್ಲೆಕ್ಸಿಯಾ ಕಾಣಿಸಬಹುದು
- ಸ್ಪಷ್ಟ ಲಕ್ಷಣಗಳಿಲ್ಲದೇ ಕೂಡ UTI ಇರಬಹುದು

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ,

**ಸೇವಾಪಥ :** ಮಾಸಿಕ ಈ-ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್ ಕೇರ್ & ಮೆಡಿಕಲ್ ಕಿಟ್ ಗಳು

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

ರೂ. 2000/ - ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್ ಗಳಿಗಾಗಿ ಸಹಕಾರ.

ರೂ. 6,000/ -ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ

ರೂ. 4,500/ - ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ

ರೂ. 3,000/ - ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ

ರೂ. 10,000/ -ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ

ರೂ. 15,000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ

ರೂ. 10,000/- ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು

## DONATE & JOIN US IN OUR MISSION

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

## Support us for constructions of Rehabilitation Centre

SEVABHARATHI REGD

A/c Holder - M/s. Sevabharathi(R)
A/c No - 120000400920
Account Type - Current Account Canara Bank Dharmasthala Branch
IFS Code - CNRB0010246

# ಅಪಘಾತ ನಿಲ್ಲಿಸದ ಹೋರಾಟ –
## ಬೆನ್ನುಹುರಿ  ಅಪಘಾತಕ್ಕೊಳಗಾದ ನಾಗೇಶ್ ರವರ ಸ್ಪೂರ್ತಿದಾಯಕ ಕಥೆ




ಶ್ರೀ ನಾಗೇಶ್ ರವರು ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಎನ್. ಆರ್. ಪುರ ತಾಲೂಕಿನ ಮಲ್ಲಂದೂರು ಗ್ರಾಮದ ನಿವಾಸಿ. ಅವರು 30 ಮೇ 1998 ರಂದು ದಿ। ವಿಜಯ್ ಕುಮಾರ್ ಮತ್ತು ಶ್ರೀಮತಿ ವೇದಾವತಿ ದಂಪತಿಯ ಪುತ್ರರಾಗಿ ಜನಿಸಿದರು.

ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮಲ್ಲಂದೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪೂರ್ಣಗೊಳಿಸಿ, ನಂತರ ಪ್ರೌಢಶಿಕ್ಷಣವನ್ನು ಬೆಳ್ಳೂರಿನಲ್ಲಿ ಮುಂದುವರೆಸಿದರು. ಆದರೆ ಜೀವನದ ಕಠಿಣ ವಾಸ್ತವಗಳು ಬೇಗನೆ ಅವರ ಬಾಗಿಲು ತಟ್ಟಿದವು. ತಂದೆಯ ಅಗಲಿಕೆಯಿಂದ ಮನೆ ಜವಾಬ್ದಾರಿ ನಾಗೇಶ್ ರವರ ಮೇಲಾಗಿತ್ತು. ಇದರ ಪರಿಣಾಮವಾಗಿ, ಓದುವ ಆಸೆ ಇದ್ದರೂ ವಿದ್ಯಾಭ್ಯಾಸವನ್ನು ಮಧ್ಯದಲ್ಲೇ ನಿಲ್ಲಿಸಿ, ಕುಟುಂಬದ ಹೊರೆ ತಗ್ಗಿಸಲು ಡ್ರೈವಿಂಗ್ ಕೆಲಸವನ್ನು ಆರಂಭಿಸಿದರು.

ಆ ನಂತರ ಅಡಿಕೆ ತೆಗೆಯುವ ಕೆಲಸವನ್ನೂ ಕೈಗೊಂಡರು. ಅವರು ಮಾಡುವ ಯಾವ ಕೆಲಸವನ್ನಾದರೂ ಪ್ರೀತಿ ಮತ್ತು ನಿಷ್ಠೆಯಿಂದ ಮಾಡುವ ಗುಣ ಇವರದಾಗಿತ್ತು. ಹೀಗೆ ಒಂದು ದಿನ ಧರ್ಮಸ್ಥಳಕ್ಕೆ ಕಾರು ಟ್ರಿಪ್‌ಗೆ ಹೋಗಿದ್ದಾಗ, ರಾತ್ರಿ ಪೂರ್ತಿ ಡ್ರೈವಿಂಗ್ ಮಾಡಿ ದೇವರ ದರ್ಶನ ಪಡೆದ ಬಳಿಕ ಮನೆಗೆ ವಾಪಸ್ಸಾಗುವಾಗ ತುಂಬಾ ಸುಸ್ತಾಗಿದ್ದರು. ಆದರೂ ವಿಶ್ರಾಂತಿ ಪಡೆಯದೆ, 2021ರ ಫೆಬ್ರವರಿ 14ರಂದು ಬೆಳಿಗ್ಗೆ ತನ್ನ ಮಾಮೂಲಿ ಕೆಲಸವಾದ ಅಡಿಕೆ ಗೊನೆ ತೆಗೆಯಲು ಮರಕ್ಕೆ ಹತ್ತಿದರು. ದೈವದ ವಿಧಿ ಬೇರೆಯೇ ಇದ್ದಿತು – ನಿದ್ರಾವಸ್ಥೆಯಲ್ಲಿದ್ದ ಇವರು ಅಡಿಕೆ ಮರದಿಂದ ಕೆಳಗೆ ಬಿದ್ದು ಭೀಕರ ಅಪಘಾತಕ್ಕೊಳಗಾದರು.

ಊರಿನವರು ಸೇರಿಕೊಂಡು ನಾಗೇಶ್ ರವರನ್ನು ತಕ್ಷಣ ಮಂಗಳೂರಿನ ಕೆ. ಎಸ್. ಹೆಗ್ಗಡೆ ಆಸ್ಪತ್ರೆಗೆ ಕರೆದೊಯ್ದರು. ಆದರೆ ವೈದ್ಯರು "ಇನ್ನು ಮುಂದೆ ನೀವು ನಡೆಯಲು ಸಾಧ್ಯವಿಲ್ಲ, ವೀಲ್ಚೇರ್‌ನ ಸಹಾಯದಿಂದಲೇ ಜೀವನ ಮುಂದುವರಿಸಬೇಕು" ಎಂದು ತಿಳಿಸಿದರು. ಈ ಸುದ್ದಿ ಅವರಿಗೆ ದೊಡ್ಡ ಆಘಾತವಾಯಿತು.

ಗುಣಮುಖರಾಗುವ ನಿರೀಕ್ಷೆಯಲ್ಲಿ ಅವರು ಒಂದು ವರ್ಷ ಹಾಸಿಗೆಯಲ್ಲೇ ಕಳೆದರು. ಬಳಿಕ ಕೊಪ್ಪದ ಪ್ರಶಮನಿ ಆಸ್ಪತ್ರೆಯಲ್ಲಿ ಡಾ. ಉದಯಶಂಕರ್ ರವರನ್ನು ಭೇಟಿಯಾದರು. ಅವರು ನಾಗೇಶ್ ರವರಿಗೆ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ತೆರಳಿ ಪುನಶ್ಚೇತನ ಪಡೆಯಲು ಸಲಹೆ ನೀಡಿದರು.

ನಂತರ ಸೇವಾಭಾರತಿ ಸಂಸ್ಥೆಯ ಕ್ಷೇತ್ರ ಸಂಯೋಜಕರಾದ ಶ್ರೀ ಮನು ರವರು, ನಾಗೇಶ್ ರವರ ಮನೆಗೆ ಭೇಟಿ ನೀಡಿ, ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ರವರನ್ನು ಪರಿಚಯ ಮಾಡಿಕೊಟ್ಟರು. ಅದರ ಮೂಲಕ ನಾಗೇಶ್ ರವರು ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಸೇರಿದರು.

ಅಲ್ಲಿ ನಡೆಸುವ ಫಿಸಿಯೋಥೆರಪಿ, ಒತ್ತಡ ಗಾಯ ನಿರ್ವಹಣೆ, ವೀಲ್ಚೇರ್‌ನಿಂದ ಬೆಡ್‌ಗೆ ಹೇಗೆ ಶಿಫ್ಟ್ ಆಗುವುದು ಮುಂತಾದ ತರಬೇತಿಗಳ ಮೂಲಕ ಅವರು ಮತ್ತೆ ಬದುಕಿನ ಹೊಸ ದಾರಿಗೆ ಕಾಲಿಟ್ಟರು.

ಸೇವಾಧಾಮದ ಸಿಬ್ಬಂದಿಯ ಪ್ರೋತ್ಸಾಹ ಮತ್ತು ಮಾರ್ಗದರ್ಶನದಿಂದ ಅವರು ಸ್ವಲ್ಪಸ್ವಲ್ಪವಾಗಿ ಚೇತರಿಸಿಕೊಂಡರು. ಒಂದು ಸಮಯದಲ್ಲಿ “ನಾನು ಮತ್ತೆ ಬದುಕಲಾರೆ” ಎನ್ನುವ ಭಾವನೆಯಿಂದ ತುಂಬಿದ್ದ ನಾಗೇಶ್ ರವರು, “ನಾನು ಏನನ್ನಾದರೂ ಸಾಧಿಸಬಹುದು” ಎಂಬ ಹೊಸ ನಂಬಿಕೆಯನ್ನು ಕಂಡುಕೊಂಡರು. ತಮ್ಮ ತಾಯಿ, ಕುಟುಂಬ ಹಾಗೂ ಸ್ನೇಹಿತರ ಪ್ರೋತ್ಸಾಹದಿಂದ ಅವರು ಹೊಸ ಶಕ್ತಿಯನ್ನು ಪಡೆದು, 3 ತಿಂಗಳ ಪುನಶ್ಚೇತನದ ನಂತರ ತಮ್ಮ ಹಳೆಯ ವೃತ್ತಿಯಾದ ಡ್ರೈವಿಂಗ್ ಕೆಲಸವನ್ನು ಮತ್ತೆ ಆರಂಭಿಸಿದರು. ಜೊತೆಗೆ, ಅಡಿಕೆಯ ಗರಿಯಿಂದ ಪೊರಕೆಯನ್ನು ತಯಾರಿಸಿ ದಿನಕ್ಕೆ 2–3 ಪೊರಕೆಯನ್ನು ಮಾಡಿ ಮಾರಾಟ ಮಾಡುವ ಮೂಲಕ ಜೀವನವನ್ನು ಪುನಃ ಕಟ್ಟಿಕೊಂಡಿದ್ದಾರೆ.
ಇಂದು ನಾಗೇಶ್ ರವರು ತಮ್ಮ ಹೋರಾಟದ ಕಥೆಯಿಂದ ಅನೇಕ ಮಂದಿಗೆ ಸ್ಪೂರ್ತಿಯಾಗಿದ್ದಾರೆ.

**ಶುಭಹಾರೈಸಲು ಸಂಪರ್ಕಿಸಿ : 7483 572 370**